# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಏಪ್ರಿಲ್ 21, 2023

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ಸಂಪುಟ : 49 ಸಂಚಿಕೆ : 339 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com



ಕೆ.ಜಿ.ಪಿ. ಗೋಲ್ಡ್ ಪ್ಯಾಲೇಸ್‌ನ
ದಶಮಾನೋತ್ಸವದ ಪ್ರಯುಕ್ತ
ರೂ. 5000/- ಆಭರಣ ಕೊಂಡಲ್ಲಿ 1 ಉಚಿತ
ಬಹುಮಾನದ ಕೂಪನ್ ಕೊಡಲಾಗುವುದು.

ಕೆ.ಜಿ.ಪಿ. ಗೋಲ್ಡ್ ಪ್ಯಾಲೇಸ್
ಫ್ರೀ ಕೂಪನ್
25 ಬಹುಮಾನಗಳು
Only 10% VA
ಬಹುಮಾನಗಳನ್ನು ಲಕ್ಕಿ ಡ್ರಾ ಮೂಲಕ ವಿತರಿಸಲಾಗುವುದು.

ನಮ್ಮೆಲ್ಲ ಪ್ರೀತಿಯ
ಗ್ರಾಹಕರಿಗೆ ರಂಜಾನ್,
ಅಕ್ಷಯ ತೃತೀಯ
ಹಬ್ಬದ ಶುಭಾಶಯಗಳು
ವಿಜಯಲಕ್ಷ್ಮೀ ರಸ್ತೆ, ದಾವಣಗೆರೆ.
ಫೋ: 08192-234451/2, ಮೊ: 9148998011/12.
*ಷರತ್ತುಗಳು ಅನ್ವಯ


## 7 ಕ್ಷೇತ್ರ, 115 ಅಭ್ಯರ್ಥಿಗಳು, 164 ನಾಮಪತ್ರ

### ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾದ ಬುಧವಾರ ಜಿಲ್ಲೆಯಲ್ಲಿ 69 ನಾಮಪತ್ರ ಸಲ್ಲಿಕೆ

ದಾವಣಗೆರೆ, ಏ.20 - ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾದ ಇಂದು ಜಿಲ್ಲೆಯ 7 ಕ್ಷೇತ್ರಗಳಿಂದ 115 ಅಭ್ಯರ್ಥಿಗಳಿಂದ 164 ನಾಮಪತ್ರಗಳು ಸಲ್ಲಿಕೆಯಾಗಿವೆ. ಜಗಳೂರು ಕ್ಷೇತ್ರ 15 ನಾಮಪತ್ರ 12 ಅಭ್ಯರ್ಥಿಗಳು, ಹರಿಹರ 21 ನಾಮಪತ್ರ 13 ಅಭ್ಯರ್ಥಿ, ದಾವಣಗೆರೆ ಉತ್ತರ 23 ನಾಮಪತ್ರ 16 ಅಭ್ಯರ್ಥಿ, ದಾವಣಗೆರೆ ದಕ್ಷಿಣ 32 ನಾಮಪತ್ರ 23 ಅಭ್ಯರ್ಥಿಗಳು, ಮಾಯಕೊಂಡ 38 ನಾಮಪತ್ರ 24 ಅಭ್ಯರ್ಥಿಗಳು, ಚನ್ನಗಿರಿ 19 ನಾಮಪತ್ರ 15 ಅಭ್ಯರ್ಥಿಗಳು ಹಾಗೂ ಹೊನ್ನಾಳಿಯಲ್ಲಿ 16 ನಾಮಪತ್ರ 12 ಅಭ್ಯರ್ಥಿಗಳಿಂದ ಸಲ್ಲಿಕೆಯಾಗಿವೆ.

ಇಂದು 69 ನಾಮಪತ್ರಗಳು: ಏಪ್ರಿಲ್ 20 ರಂದು ಸಲ್ಲಿಸಿದ 69 ನಾಮಪತ್ರಗಳಲ್ಲಿ 66 ಪುರುಷ, 3 ಮಹಿಳೆಯರ ನಾಮಪತ್ರಗಳು ಸೇರಿವೆ. ಉಳಿದಂತೆ ಬಿಜೆಪಿ 7, ಕಾಂಗ್ರೆಸ್ 5, ಆಮ್ ಆದ್ಮಿ 6, ಬಿಎಸ್‌ಪಿ 4, ಜೆಡಿಎಸ್ 7, ಇತರೆ ಪಕ್ಷ 9, ಪಕ್ಷೇತರ 31 ನಾಮಪತ್ರಗಳು ಸೇರಿವೆ. ಇಂದು 59 ಪುರುಷ, 3 ಮಹಿಳೆಯರು ಸೇರಿ 62 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ.

ಜಗಳೂರು ವಿಧಾನಸಭಾ ಕ್ಷೇತ್ರದಿಂದ ಎಂ.ಓ.ದೇವರಾಜ್ ಜೆಡಿಎಸ್, ದಿವಾಕರ .ಓ, ನಾಗರಾಜ ಎಂ, ರಾಘವೇಂದ್ರ ಕೆ.ಆರ್., ಹೆಚ್. ಪಿ.ರಾಜೇಶ್, ಡಿ.ತಿಪ್ಪೇಸ್ವಾಮಿ, ಭೀಮಪ್ಪ.ಜಿ. ಎನ್ ಪಕ್ಷೇತರ, ಜಿ.ಸ್ವಾಮಿ ಸಮಾಜವಾದಿ ಪಾರ್ಟಿಯಿಂದ ನಾಮಪತ್ರ ಸಲ್ಲಿಸಿದರು.

ಹರಿಹರ ವಿಧಾನಸಭಾ ಕ್ಷೇತ್ರದಿಂದ ಶ್ರೀನಿವಾಸ ಎನ್.ಹೆಚ್. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ 2, ಬಿ.ಪಿ.ಹರೀಶ್ ಬಿಜೆಪಿ, ಡಿ.ಹನುಮಂತಪ್ಪ ಬಿಎಸ್‌ಪಿ, ಜಿ. ಹೆಚ್.ಬಸವರಾಜ ಆಮ್ ಆದ್ಮಿ, ಜ್ಞಾನೇಶಪ್ಪ ದರುಗದ ಆಮ್ ಆದ್ಮಿ, ಜಯಕುಮಾರ್ ಟಿ. ಹೆಚ್, ಕರಿಬಸಪ್ಪ ಮಠದಾವ, ಬಿ.ಎಸ್. ಉಜ್ಜನಪ್ಪ, ಮೂರ್ತಿ ಹೆಚ್.ಕೆ ಪಕ್ಷೇತರರಾಗಿ ನಾಮಪತ್ರ ಸಲ್ಲಿಸಿದರು.

ದಾವಣಗೆರೆ ಉತ್ತರ ಕ್ಷೇತ್ರಕ್ಕೆ ಲೋಕಿಕೆರೆ ನಾಗರಾಜ್ ಬಿಜೆಪಿಯಿಂದ 2 ನಾಮಪತ್ರ, ಮಂಜುನಾಥ.ಎನ್ ಪಕ್ಷೇತರ, ಎಂ.ಜಿ. ಶಿವಶಂಕರ್ ಜೆಡಿಎಸ್, ಮೊಹಮ್ಮದ್ ಹಯಾತ್ ಎಂ. ಪಕ್ಷೇತರ, ಸುರ್ಜಿತ್ ಜಿ ಸಂಯುಕ್ತ ವಿಕಾಸ ಪಾರ್ಟಿಯಿಂದ ನಾಮಪತ್ರ ಸಲ್ಲಿಸಿದರು. ದಾವಣಗೆರೆ ದಕ್ಷಿಣ ಕ್ಷೇತ್ರಕ್ಕಾಗಿ ಗೌಸ್‌ಪೀರ್ ಕಲ್ಯಾಣ ರಾಜ್ಯ ಪ್ರಗತಿ ಪಕ್ಷ 2 ನಾಮಪತ್ರ, ಅಜಯ್ ಕುಮಾರ್ ಬಿ.ಜಿ ಬಿಜೆಪಿ, ಶಾಮನೂರು ಶಿವಶಂಕರಪ್ಪ ಭಾರತೀಯ ರಾಷ್ಟ್ರೀಯ (2ನೇ ಪುಟಕ್ಕೆ)





**ಬಿಜೆಪಿ ಅಭ್ಯರ್ಥಿಗಳ ಶಕ್ತಿ ಪ್ರದರ್ಶನ** ದಾವಣಗೆರೆ ದಕ್ಷಿಣ ಹಾಗೂ ಉತ್ತರ ಕ್ಷೇತ್ರದ ಅಭ್ಯರ್ಥಿಗಳಾದ ಬಿ.ಜಿ. ಅಜಯ್ ಕುಮಾರ್ ಹಾಗೂ ಲೋಕಿಕೆರೆ ನಾಗರಾಜ್ ಅವರುಗಳು ಬುಧವಾರ ಅಪಾರ ಸಂಖ್ಯೆಯ ಕಾರ್ಯಕರ್ತರೊಂದಿಗೆ ಮೆರವಣಿಗೆ ನಡೆಸಿ ನಾಮಪತ್ರ ಸಲ್ಲಿಸಿದರು.

## ಕನಕಪುರದಿಂದ ಡಿಕೆಶಿ ಸಹೋದರ ಸುರೇಶ್ ನಾಮಪತ್ರ ಸಲ್ಲಿಕೆ



**ಕಾನೂನು ತೊಡಕು ಸಾಧ್ಯತೆಯಿಂದ ಮುನ್ನೆಚ್ಚರಿಕೆ**


ಬೆಂಗಳೂರು, ಏ. 20 - ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕೊನೆ ಗಳಿಗೆಯಲ್ಲಿ ತಮ್ಮ ಸಹೋದರ ಸಂಸದ ಡಿ.ಕೆ. ಸುರೇಶ್ ಅವರಿಂದ ಕನಕಪುರ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿಸಿ ಅಚ್ಚರಿ ತಂದಿದ್ದಾರೆ.

ಪಕ್ಷ ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿ ಸ್ಥಾನ ಏರಲು ಮುಂಚೂಣಿಯಲ್ಲಿರುವ ಶಿವ ಕುಮಾರ್ ನಾಮಪತ್ರ ಸಲ್ಲಿಕೆಯ ಕೊನೆ ದಿನವಾದ ಇಂದು ತನ್ನ ಸಹೋದರನಿಂದ 3 ನಾಮಪತ್ರಗಳನ್ನು ಸಲ್ಲಿಕೆ ಮಾಡಿಸಿದ್ದಾರೆ.

ಕಂದಾಯ ಸಚಿವ ಆರ್. ಅಶೋಕ್ ಸ್ಪರ್ಧಿಸಿರುವ ಪದ್ಮನಾಭ ವಿಧಾನಸಭಾ ಕ್ಷೇತ್ರದಿಂದ ಸುರೇಶ್ ಅವರನ್ನು ಕಣಕ್ಕಿಳಿಸುವ ಬಗ್ಗೆ ಚಿಂತನೆ ನಡೆಸಿದ್ದ ಶಿವಕುಮಾರ್ ಕಡೇ ಗಳಿಗೆಯಲ್ಲಿ ಈ ನಿರ್ಧಾರ ಕೈಗೊಂಡಿದ್ದಾರೆ.

ಏಪ್ರಿಲ್ 17 ರಂದು ಶಿವಕುಮಾರ್ ಕಾಂಗ್ರೆಸ್ ಅಭ್ಯರ್ಥಿಯಾಗಿ ಕನಕಪುರದಿಂದ ನಾಮಪತ್ರ ಸಲ್ಲಿಸಿದ್ದರು. ಆದರೆ ಅವರ (2ನೇ ಪುಟಕ್ಕೆ)

## ಹಣಕಾಸು ಬಿಕ್ಕಟ್ಟು : ಲಂಕಾದಿಂದ ಲಕ್ಷ ಕೋತಿ ರಫ್ತು



ಕೊಲಂಬೊ, ಏ. 20- ಹಣಕಾಸು ಸಂಕಷ್ಟದಲ್ಲಿರುವ ಶ್ರೀಲಂಕಾ, ಚೀನಾಗೆ 1 ಲಕ್ಷ ಕೋತಿಗಳನ್ನು ಹಂತ ಹಂತವಾಗಿ ರಫ್ತು ಮಾಡಲು ನಿರ್ಧರಿಸಿದೆ.

ಈ ವಿಷಯ ಖಚಿತಪಡಿಸಿರುವ ಶ್ರೀಲಂಕಾ ಕೃಷಿ ಸಚಿವಾಲಯದ ಉನ್ನತ ಅಧಿಕಾರಿ ಗುಣದಾಸ ಸಮರಸಿಂಘೆ, ಒಂದೇ ಬಾರಿಗೆ ಲಕ್ಷ ಕೋತಿಗಳನ್ನು ಕಳಿಸುವುದಿಲ್ಲ. ರಕ್ಷಿತ ಪ್ರದೇಶಗಳ ಹೊರಗಿದ್ದುಕೊಂಡು ಬೆಳೆ ಹಾನಿ ಮಾಡುತ್ತಿರುವ ಕೋತಿಗಳನ್ನು ರಫ್ತು ಮಾಡಲಾಗುವುದು ಎಂದಿದ್ದಾರೆ.

ಟೋಕ್ ಮಕಾಕ್ ಕೋತಿಗಳು ಶ್ರೀಲಂಕಾ ದಲ್ಲಿ ಅಪಾಯದಲ್ಲಿವೆ ಎಂಬುದನ್ನು ಗುರುತಿಸಲಾಗಿದೆ. ಅವುಗಳ ರಫ್ತಿಗೆ ಪರಿಸರ ಸಂಘಟನೆಗಳು ಆಕ್ಷೇಪಿಸಿವೆ. ಕಳೆದ ವಾರ ಹೇಳಿಕೆ ನೀಡಿದ್ದ ಶ್ರೀಲಂಕಾ ಕೃಷಿ ಸಚಿವ ಮಹಿಂದ ಅಮರವೀರ, ಚೀನಾದ ಕಂಪನಿಯೊಂದು ಲಕ್ಷ ಕೋತಿಗಳನ್ನು ಆಮದು ಮಾಡಿಕೊಳ್ಳಲು ಬಯಸಿದೆ. ಚೀನಾದ ಸಾವಿರಕ್ಕೂ ಹೆಚ್ಚು ಪ್ರಾಣಿ ಸಂಗ್ರಹಾಲಯಗಳಲ್ಲಿ ಇವುಗಳ ಪ್ರದರ್ಶನ ಮಾಡಲಾಗುವುದು ಎಂದಿದ್ದರು.


ಶ್ರೀಲಂಕಾ ಬಹುತೇಕ ಎಲ್ಲ ಪ್ರಾಣಿಗಳ ರಫ್ತಿನ ಮೇಲೆ (2ನೇ ಪುಟಕ್ಕೆ)

### ಇಂದು ದ್ವಿತೀಯ ಪಿಯು ಫಲಿತಾಂಶ

ಬೆಂಗಳೂರು, ಏ. 20 - 2022-23ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶ ನಾಳೆ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಪ್ರಕಟವಾಗಲಿದೆ. ಫಲಿತಾಂಶ ಘೋಷಣೆ ಸಂಬಂಧ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ನಾಳೆ ಬೆಳಿಗ್ಗೆ 10 ಗಂಟೆಗೆ ಸುದ್ದಿಗೋಷ್ಠಿ ಕರೆಯಲಾಗಿದ್ದು, 11 ಗಂಟೆಯ ನಂತರ ಜಾಲತಾಣ https:// karresults.nic.in ನಲ್ಲಿ ಫಲಿತಾಂಶ ಲಭ್ಯವಾಗಲಿದೆ.

2022-23ನೇ ಶೈಕ್ಷಣಿಕ ಸಾಲಿನಲ್ಲಿ 7,27,387 ವಿದ್ಯಾರ್ಥಿಗಳು ಪರೀಕ್ಷೆಗೆ ಹೆಸರು ನೋಂದಾಯಿಸಿಕೊಂಡಿದ್ದರು. ರಾಜ್ಯದ 1,109 ಕೇಂದ್ರಗಳಲ್ಲಿ ಮಾ. 9 ರಿಂದ ಏ. 29ರವರೆಗೂ ಪರೀಕ್ಷೆಗಳು ನಡೆದಿದ್ದವು.

## ರಾಹುಲ್ ಗಾಂಧಿ ಶಿಕ್ಷೆ ತಡೆಗೆ ಕೋರ್ಟ್ ನಕಾರ



**ಮೋದಿ ಉಪನಾಮ ಪ್ರಕರಣಕ್ಕೆ ಎರಡು ವರ್ಷ ಶಿಕ್ಷೆ ವಿಧಿಸಿದ್ದ ನ್ಯಾಯಾಲಯ**

ಸೂರತ್, ಏ. 20 – ಮೋದಿ ಉಪನಾಮ ಪ್ರಕರಣಕ್ಕೆ ಸಂಬಂಧಿಸಿದಂತೆ ತಮಗೆ ವಿಧಿಸಲಾಗಿರುವ ಎರಡು ವರ್ಷಗಳ ಶಿಕ್ಷೆ ತಡೆಯಬೇಕೆಂದು ಕೋರಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ದಾಖಲಿಸಿದ್ದ ಮನವಿ ಯನ್ನು ಸೂರತ್‌ನ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ ತಳ್ಳಿ ಹಾಕಿದೆ.

ಹೆಚ್ಚುವರಿ ಸೆಷನ್ಸ್ ನ್ಯಾಯ ಮೂರ್ತಿ ಆರ್.ಪಿ. ಮೊಗೇರ ಅವರು ಮನವಿ ಯನ್ನು ತಿರಸ್ಕರಿ ಸಿದ್ದಾರೆ. ಎರಡು ವರ್ಷಗಳ ಶಿಕ್ಷೆಯ ನಂತರ ರಾಹುಲ್ ಗಾಂಧಿ ಅನರ್ಹಗೊಂಡಿದ್ದರು. ಮನವಿ ಪುರಸ್ಕೃತಗೊಂಡಿದ್ದಲ್ಲಿ ರಾಹುಲ್ ಗಾಂಧಿ ಮತ್ತೆ ಸಂಸದರಾಗುವ ಹಾದಿ ತೆರವಾಗುತ್ತಿತ್ತು. ನ್ಯಾಯಾಲಯದ ತೀರ್ಪನ್ನು ಗುಜರಾತ್ ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗುವುದು ಎಂದು ರಾಹುಲ್ ಗಾಂಧಿ ಪರ ವಕೀಲ ಕಿರಿತ್ ಪಾನ್ವಾಲ ತಿಳಿಸಿದ್ದಾರೆ. ರಾಹುಲ್ ಗಾಂಧಿಗೆ ಶಿಕ್ಷೆ ವಿಧಿಸಿ ಕೆಳ ನ್ಯಾಯಾಲಯ (3ನೇ ಪುಟಕ್ಕೆ)

## ನರೋಡಾ ಹತ್ಯೆ : 67 ಆರೋಪಿಗಳೂ ಖುಲಾಸೆ

ಅಹಮದಾಬಾದ್, ಏ. 20 – ಗುಜರಾತ್‌ನ ಅಹಮದಾಬಾದ್‌ನ ನರೋಡಾ ಗಾಮ್ ಹತ್ಯಾಕಾಂಡ ಪ್ರಕರಣದ ಎಲ್ಲಾ 67 ಆರೋಪಿಗಳನ್ನು ವಿಶೇಷ ನ್ಯಾಯಾಲಯ ಖುಲಾಸೆಗೊಳಿಸಿದೆ. 11 ಮುಸ್ಲಿಮರ ಹತ್ಯೆ ನಡೆದಿದ್ದ ಈ ಪ್ರಕರಣದಲ್ಲಿ ಗುಜರಾತ್ ಮಾಜಿ ಸಚಿವೆ ಮಾಯಾ ಕೊಡ್ನಾನಿ ಹಾಗೂ ಭಜರಂಗ ದಳದ ಮಾಜಿ ನಾಯಕ ಬಾಬು ಭಜರಂಗಿ ಆರೋಪಿಗಳಾಗಿದ್ದರು.

ಅಹಮದಾಬಾದ್‌ನ ವಿಶೇಷ ನ್ಯಾಯಾಲಯದ ನ್ಯಾಯಮೂರ್ತಿ ಎಸ್.ಕೆ. ಬಕ್ಷಿ ಅವರು ಆರೋಪಿಗಳನ್ನು ಖುಲಾಸೆಗೊಳಿಸಿದ್ದಾರೆ. 2002ರ ಫೆಬ್ರವರಿ 27ರಂದು ನಡೆದ ಗೋಧ್ರಾ ಹತ್ಯಾಕಾಂಡದ ನಂತರ ನರೋಡಾ ಗಾಮ್ ಹತ್ಯಾಕಾಂಡ ನಡೆದಿತ್ತು. ಸುಪ್ರೀಂ ಕೋರ್ಟ್‌ನಿಂದ ನೇಮಕಗೊಂಡಿದ್ದ ವಿಶೇಷ ತನಿಖಾ ತಂಡ ಈ ಪ್ರಕರಣದ ತನಿಖೆ ನಡೆಸಿತ್ತು.



ಬಿಜೆಪಿಯ ಮಾಜಿ ಸಚಿವೆ ಕೊಡ್ನಾನಿ, ವಿ. ಹೆಚ್.ಪಿ. ಮಾಜಿ ಮುಖಂಡ ಜಯದೀಪ್ ಪಟೇಲ್ ಹಾಗೂ ಭಜರಂಗ ದಳದ ಮಾಜಿ ನಾಯಕ ಬಾಬು ಭಜರಂಗಿ ಸಹ ಖುಲಾಸೆಗೊಂಡವರಲ್ಲಿ ಸೇರಿದ್ದಾರೆ.

ಪ್ರಕರಣದಲ್ಲಿ 86 ಆರೋಪಿಗಳಿದ್ದರು. ಇವರಲ್ಲಿ 18 ಜನ ವಿಚಾರಣೆ ಅವಧಿಯಲ್ಲಿ ಕೊನೆಯುಸಿರೆಳೆದಿದ್ದರು. ಸಾಕ್ಷಿ ಕೊರತೆಯಿಂದ ಒಬ್ಬ ಆರೋಪಿಯನ್ನು ಈ ಹಿಂದೆ ಖುಲಾಸೆಗೊಳಿಸಲಾಗಿತ್ತು.

ತೀರ್ಪಿನ ನಂತರ ಹೇಳಿಕೆ ನೀಡಿರುವ ಆರೋಪಿ ಪರ ವಕೀಲ ಚೇತನ್ ಷಾ, ಅಮಾಯಕರು ಖುಲಾಸೆಗೊಂಡಿದ್ದಾರೆ ಎಂದು ತಿಳಿಸಿದ್ದಾರೆ. ಸಂತ್ರಸ್ತರ ಪರವಾಗಿ ವಾದ ಮಂಡಿಸಿದ್ದ ವಕೀಲ ಷಹಶಾದ್ ಪಠಾಣ್, ತೀರ್ಪು ಪ್ರಶ್ನಿಸಿ ಗುಜರಾತ್ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸುವುದಾಗಿ ಹೇಳಿದ್ದಾರೆ. ಗೋಧ್ರಾ ಹತ್ಯಾಕಾಂಡದ ನಂತರ ಗುಜರಾತ್ ಬಂದ್‌ಗೆ ಕರೆ ನೀಡಲಾಗಿತ್ತು. ಆಗ ನಡೆದ ಗಲಭೆಗಳಲ್ಲಿ ನರೋಡಾ ಗಾಮ್ ಹತ್ಯಾಕಾಂಡ ನಡೆದಿತ್ತು.

ಸುದೀರ್ಘ ಕಾಲ ನಡೆದ ಈ ಪ್ರಕರಣದ ವಿಚಾರಣೆಯನ್ನು ಆರು ನ್ಯಾಯಮೂರ್ತಿಗಳು ನಿರ್ವಹಿಸಿದ್ದರು. 2010ರಲ್ಲಿ ಪ್ರಕರಣದ ವಿಚಾರಣೆ ಆರಂಭವಾಗಿತ್ತು.

ನರೋಡಾ ಪಾಟಿಯಾದಲ್ಲಿ ನಡೆದ ಹತ್ಯಾಕಾಂಡಕ್ಕೆ ಸಂಬಂಧಿಸಿದಂತೆ (2ನೇ ಪುಟಕ್ಕೆ)


II PU TUITION
SUPPLEMENTARY
SCIENCE COMMERCE 100% Result
K-CET, NEET
Long Term Coaching
WINNERS
CAREER ACADEMY
COACHING CENTRE FOR ALL EXAMS
Near Stadium, P.J. Extn., Davangere
9886997892, 9148596892


## ಡಿಕೆಶಿ ವಿರುದ್ಧ ಸಿಬಿಐ ಕ್ರಮ ತಡೆಯಲು ಹೈಕೋರ್ಟ್ ನಕಾರ



ಬೆಂಗಳೂರು, ಏ. 20 – ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ದೋಷಾರೋಪಕ್ಕೆ ಸಿ.ಬಿ.ಐ.ಗೆ ರಾಜ್ಯ ಸರ್ಕಾರ ನೀಡಿದ್ದ ಅನುಮತಿ ಪ್ರಶ್ನಿಸಿ ದಾಖಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ತಿರಸ್ಕರಿಸಿದೆ.

ರಾಜ್ಯ ಸರ್ಕಾರದ ಅನುಮತಿಯ ಆಧಾರದ ಮೇಲೆ ಶಿವಕುಮಾರ್ ವಿರುದ್ಧ ಅಕ್ಟೋಬರ್ 3, (2ನೇ ಪುಟಕ್ಕೆ)

## ಕಾಂಗ್ರೆಸ್‌ಗೆ ದಸಂಸ ಬೆಂಬಲ

ಬೆಂಗಳೂರು, ಏ. 20 - ದೇಶದಲ್ಲಿ ಸಂವಿಧಾನ, ಪ್ರಜಾಪ್ರಭುತ್ವ ರಕ್ಷಣೆ, ದಲಿತ ಸಮುದಾಯಗಳ ಹಕ್ಕು ರಕ್ಷಣೆ ಹಾಗೂ ದಲಿತರ ಮೇಲಿನ ದೌರ್ಜನ್ಯಗಳನ್ನು ಕೊನೆಗಾಣಿಸುವ ನಿಟ್ಟಿನಲ್ಲಿ 2023ರ ಕರ್ನಾಟಕ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ 224 ಕ್ಷೇತ್ರಗಳಲ್ಲಿ ದಲಿತ (3ನೇ ಪುಟಕ್ಕೆ)






ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರ ಚುನಾವಣಾ ಪ್ರಚಾರ

ದಾವಣಗೆರೆ ನಗರದ 39ನೇ ವಾರ್ಡ್‌ನ ವಿವಿಧ ಪ್ರದೇಶಗಳಲ್ಲಿ ಉತ್ತರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ
ಎಸ್.ಎಸ್. ಮಲ್ಲಿಕಾರ್ಜುನ್
ಅವರಿಂದ ದಿನಾಂಕ 21-4-2023ರ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ವಿದ್ಯಾನಗರದ
ಶ್ರೀ ಶಿವಪಾರ್ವತಿ ದೇವಸ್ಥಾನದಿಂದ
ಪೂಜೆ ಸಲ್ಲಿಸಿದ ನಂತರ ಚುನಾವಣೆ ಪ್ರಚಾರ ಆರಂಭಗೊಂಡು ಮಧ್ಯಾಹ್ನ 1 ಗಂಟೆಗೆ ಮುಕ್ತಾಯಗೊಳ್ಳುತ್ತದೆ.
ಮತ್ತೆ ಸಂಜೆ 5-00 ಗಂಟೆಯಿಂದ ರಾತ್ರಿ 9-00 ಗಂಟೆಯವರೆಗೆ 39ನೇ ವಾರ್ಡ್‌ನ ವಿದ್ಯಾನಗರದಲ್ಲಿ ಪ್ರಚಾರ ನಡೆಸುವರು.
ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಜನಪ್ರತಿನಿಧಿಗಳು, ಮುಖಂಡರು, ಕಾರ್ಯಕರ್ತರು ಮತ್ತು ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೋರಲಾಗಿದೆ.
ಪ್ರಕಟಣೆ:
ಎಸ್.ಎಸ್.ಎಂ ಅಭಿಮಾನಿಗಳ ಬಳಗ

# ಹರಿಹರ ಕ್ಷೇತ್ರದಲ್ಲಿ ಬಿಜೆಪಿಗೆ ಉತ್ತಮ ವಾತಾವರಣ : ಬಿ.ಪಿ. ಹರೀಶ್

ಹರಿಹರ, ಏ. 20 - ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷವು ನನಗೆ ಎಷ್ಟರಮಟ್ಟಿಗೆ ಪೈಪೋಟಿಯನ್ನು ಕೊಡಬಲ್ಲದು ಎಂಬುದರ ಬಗ್ಗೆ ಒಂದು ವಾರದ ನಂತರ ಸಂಪೂರ್ಣ ಮಾಹಿತಿ ಕೊಡುವು ದಾಗಿ ಮಾಜಿ ಶಾಸಕರೂ ಆಗಿರುವ ಬಿಜೆಪಿ ಅಭ್ಯರ್ಥಿ ಬಿ.ಪಿ. ಹರೀಶ್ ಹೇಳಿದರು.

ನಗರದ ತಹಶೀಲ್ದಾರ್ ಕಚೇರಿಯ ಆವರಣದಲ್ಲಿ 'ಜನತಾವಾಣಿ' ಯೊಂದಿಗೆ ಮಾತನಾಡಿದ ಅವರು, ನಾನು ಹಿಂದೆ ಶಾಸಕರಾಗಿದ್ದ ಸಮಯದಲ್ಲಿ ಆಗಿರುವ ಅಭಿವೃದ್ಧಿ ಕಾರ್ಯಗಳನ್ನು ಜನರು ಮೆಚ್ಚಿಕೊಂಡಿದ್ದಾರೆ.

ನಾವೂ ಕೂಡ ಈಗಾಗಲೇ ಪಕ್ಷದ ಅಭಿವೃದ್ಧಿ ಕಾರ್ಯಗಳನ್ನು ಇಟ್ಟುಕೊಂಡು ಮನೆ ಮನೆಗೆ ಭೇಟಿ ಕೊಟ್ಟು ಮತಯಾಚನೆ ಮಾಡುವಲ್ಲಿ ನಿರತರಾಗಿದ್ದೇವೆ.

ಕಾಂಗ್ರೆಸ್ ಅಥವಾ ಇನ್ನೊಂದು ಪಕ್ಷದ ವಿಚಾರಗಳ ಬಗ್ಗೆ ಹೆಚ್ಚು ಗಮನ ಕೊಡುತ್ತಿಲ್ಲ. ಪೇಜ್ ಪ್ರಮುಖ, ಬೂತ್ ಶಕ್ತಿ ಕೇಂದ್ರ ಸೇರಿದಂತೆ ಇತರೆ ರೀತಿಯಲ್ಲಿ ಕಾರ್ಯ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಇದರಿಂದಾಗಿ ನಮಗೆ ಉತ್ತಮ ವಾತಾವರಣ



ತಾಲ್ಲೂಕಿನಲ್ಲಿ ಸೃಷ್ಟಿಯಾಗಿದೆ ಎಂದರು.

ಬೆಲೆ ಏರಿಕೆ ವಿಚಾರಗಳು ನಮ್ಮಲ್ಲಿ ಇರುವುದಿಲ್ಲ. ಕಾರಣ ನೆರೆ ದೇಶಗಳಾದ ಶ್ರೀಲಂಕಾ, ಪಾಕಿಸ್ತಾನ, ಆಫ್ಘಾನಿಸ್ಥಾನ ಸೇರಿದಂತೆ ಹಲವಾರು ದೇಶಗಳಲ್ಲಿ ಆರ್ಥಿಕ ಪರಿಸ್ಥಿತಿ ಬುಡಮೇಲು ಆಗುವ ಹಂತದಲ್ಲಿ ಸಾಗಿವೆ.

ಆದರೆ ಪ್ರಧಾನಿ ನರೇಂದ್ರ ಮೋದಿಯವರು ದೇಶವನ್ನು ಸುಭದ್ರ ಹಾಗೂ ಶಾಂತಿಯುತವಾಗಿರಿಸಲು ಶ್ರಮಿಸಿದ್ದಾರೆ ಎಂದರು.

ಕಾಂಗ್ರೆಸ್ ಅಭ್ಯರ್ಥಿಯಾಗಿ ನಂದಿಗಾವಿ ಶ್ರೀನಿವಾಸ್ ಅವರು ಟಿಕೆಟ್ ಪಡೆಯುವ ಸಮಯದಲ್ಲಿ ಕನಕ ಗುರು ಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಮಹಾ ಸ್ವಾಮಿಗಳ ಪಾತ್ರದ ಬಗ್ಗೆ ನಾನು ಏನೂ ಹೇಳುವುದಿಲ್ಲ.

ನಾನು ಟಿಕೆಟ್ ಪಡೆದ ನಂತರ ಅವರನ್ನು ಭೇಟಿ ಮಾಡಿದಾಗ ನನಗೂ ಆಶೀರ್ವಾದ ಮಾಡಿದರು.

ನಮ್ಮ ಪಕ್ಷದಲ್ಲಿ ಹಾಲುಮತ ಸಮುದಾಯದ ಐರಣಿ ಅಣ್ಣಪ್ಪ, ಕೊಮಾರನಹಳ್ಳಿ ಮಹೇಶ್, ಶ್ರೀನಿವಾಸ್ ಚಂದಪೂರ್ ಅವರು ನಮ್ಮ ಪರವಾಗಿ ಶ್ರಮವಹಿಸಿ ಪಕ್ಷದ ಗೆಲುವಿಗಾಗಿ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ ಎಂದರು.

ಜಿ.ಪಂ. ಮಾಜಿ ಸದಸ್ಯ ವಾಗೀಶ್ ಸ್ವಾಮಿ ಕೂಡ ಬಿಜೆಪಿಯಿಂದ ಗೆದ್ದು ಸದಸ್ಯರಾಗಿದ್ದರು. ಅವರು ಪಕ್ಷೇತರರಾಗಿ ಸ್ಪರ್ಧಿಸಿದರೆ ಅದರಿಂದ ಪಕ್ಷಕ್ಕೆ ಯಾವುದೇ ರೀತಿಯ ಹಿನ್ನಡೆಯಾಗುವುದಿಲ್ಲ. ಈ ಬಾರಿ ಕ್ಷೇತ್ರದಲ್ಲಿ ಬಿಜೆಪಿ ಪಕ್ಷಕ್ಕೆ ಜನರಿಂದ ಉತ್ತಮ ಜನ ಬೆಂಬಲ ಇದ್ದು, ಗೆಲುವು ನಿಶ್ಚಿತ ಎಂದರು.

ಈ ಸಮಯದಲ್ಲಿ ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ನಗರ ಬಿಜೆಪಿ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ಕಾರ್ಯದರ್ಶಿ ತುಳಜಪ್ಪ ಭೂತೆ, ಹೆಚ್ ಮಂಜಾನಾಯ್ಕ್, ನಿರಂಜನ ದೀಟೂರು, ದೇವೇಂದ್ರಪ್ಪ, ಕುಮಾರ್ ಸಿರಿಗೆರೆ, ಮೋಹನ್, ಕೆಂಚನಹಳ್ಳಿ ಮಹಾಂತೇಶ್ ಮತ್ತಿತರರು ಉಪಸ್ಥಿತರಿದ್ದರು.

## ಹಡಗಲಿ: ಬಿಜೆಪಿ ಅಭ್ಯರ್ಥಿ ಕೃಷ್ಣ ನಾಯಕ್ ನಾಮಪತ್ರ ಸಲ್ಲಿಕೆ



ಹೂವಿನಹಡಗಲಿ, ಏ.20- ಇಲ್ಲಿನ ಬಿಜೆಪಿ ಅಧಿಕೃತ ಅಭ್ಯರ್ಥಿ ಕೃಷ್ಣ ನಾಯಕ್ ಅವರು ಇಂದು ಬೃಹತ್ ಶೋಭಾ ಯಾತ್ರೆ ಮೂಲಕ ಸಂಚರಿಸಿ ನಾಮಪತ್ರ ಸಲ್ಲಿಸಿದರು.

ಶ್ರೀ ಆಂಜನೇಯ ದೇವಸ್ಥಾನದಿಂದ ಪ್ರಾರಂಭವಾದ ಮೆರವಣಿಗೆ, ಶಾಸ್ತ್ರಿ ವೃತ್ತ, ಅಂಬೇಡ್ಕರ್ ವೃತ್ತ, ಸೋಗಿ ವೃತ್ತದ ಮೂಲಕ ಸಾಗಿ ತಾಲ್ಲೂಕು ಕಚೇರಿ ತಲುಪಿತು. ತೆರೆದ ವಾಹನದಲ್ಲಿ ಅಭ್ಯರ್ಥಿ ಕೃಷ್ಣ ನಾಯಕ್, ಎಂಪಿ ಪ್ರಕಾಶ್ ಅವರ ಪುತ್ರಿ ಸುಮಾ ವಿಜಯ್, ಪಕ್ಷದ ಮುಖಂಡರಾದ ಓದೋ ಗಂಗಪ್ಪ, ಮಾಜಿ ಶಾಸಕರಾದ ಬಿ. ಚಂದ್ರನಾಯಕ್, ನಂದಿಹಳ್ಳಿ ಹಾಲಪ್ಪ, ಶಿವಪುರ ಸುರೇಶ್, ಡಾ. ಲಕ್ಷ್ಮಣ ನಾಯಕ, ಪಿ. ವಿಜಯಕುಮಾರ್ ಮತ್ತಿತರರು ಇದ್ದರು. ಮೆರವಣಿಗೆ ಶಾಸ್ತ್ರಿ ವೃತ್ತವನ್ನು ತಲುಪುತ್ತಿದ್ದಂತೆ ಜೆಸಿಬಿ ವಾಹನಗಳ ಮೂಲಕ ಅಭ್ಯರ್ಥಿಗೆ ಹೂವು ಮಳೆಯನ್ನು ಸುರಿಸಲಾಯಿತು.

ಚುನಾವಣಾ ಅಧಿಕಾರಿ ಶರಣಪ್ಪ ಮುದುಗಲ್‌ರವರಿಗೆ ಕೃಷ್ಣ ನಾಯಕ್ ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ವಿಜಯಕುಮಾರ್, ಓದೋ ಗಂಗಪ್ಪ, ಚಂದ್ರನಾಯಕ್ ಎಂ, ಪರಮೇಶ್ವರಪ್ಪ ವಕೀಲರು ಹಾಜರಿದ್ದರು.

ನಂತರ ಕೆ.ಆರ್.ಪಿ ಪಿ. ಪಕ್ಷದಿಂದ ಭೋಜ ನಾಯಕ್ ಮತ್ತು ಜೆಡಿಎಸ್ ಪಕ್ಷದಿಂದ ಕೆ. ಪುತ್ರೇಶ್ ನಾಮಪತ್ರ ಸಲ್ಲಿಸಿದರು.

## ಡಿಕೆ ಸುರೇಶ್ ನಾಮಪತ್ರ ಸಲ್ಲಿಕೆ

**(1ನೇ ಪುಟದಿಂದ)** ನಾಮಪತ್ರ ತಿರಸ್ಕೃತಗೊಳ್ಳುವ ಮಾತುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆಯಾಗಿ ಇಂತಹ ತೀರ್ಮಾನ ಕೈಗೊಂಡರು ಎನ್ನಲಾಗಿದೆ. ಶಿವಕುಮಾರ್ ಸಲ್ಲಿಸಿರುವ ನಾಮಪತ್ರದಲ್ಲಿ ಕೆಲವು ಕಾನೂನು ಲೋಪಗಳಿರುವುದನ್ನು ಬಿಜೆಪಿ ಪತ್ತೆ ಹಚ್ಚಿದೆ. ಅವರ ಅರ್ಜಿಯ ಬಗ್ಗೆ ಪಕ್ಷದ ಕೇಂದ್ರೀಯ ಕಾನೂನು ಘಟಕವೇ ಪರಿಶೀಲನೆಗೆ ತೆಗೆದುಕೊಂಡಿದೆ.

ಶಿವಕುಮಾರ್ ಸಲ್ಲಿಸಿರುವ ನಾಮಪತ್ರದಲ್ಲಿ ವಿಶೇಷವಾಗಿ ಆಸ್ತಿ ವಿವರ ಹಾಗೂ ತಮ್ಮ ಮೇಲಿರುವ ಮೊಕದ್ದಮೆಗಳಿಗೆ ಸಂಬಂಧಿಸಿದಂತೆ ಸಮಸ್ಯೆ ಉದ್ಭವವಾಗಬಹುದೆಂದು ಕಾನೂನು ತಜ್ಞರು ಅವರ ಗಮನಕ್ಕೆ ತಂದಿದ್ದಾರೆ.

ನಂತರ ತಮ್ಮ ಅರ್ಜಿಗೆ ಸಂಬಂಧಿಸಿದಂತೆ ಆಪ್ತರು ಹಾಗೂ ಕಾನೂನು ತಜ್ಞರೊಟ್ಟಿಗೆ ಚರ್ಚೆ ನಡೆಸಿ, ಅವರ ಸಲಹೆ ಮೇರೆಗೆ ಸುರೇಶ್ ಅವರನ್ನು ಕಣಕ್ಕಿಳಿಸಿದ್ದಾರೆ. ಆದಾಯಕ್ಕಿಂತ ಹೆಚ್ಚು ಆಸ್ತಿಪಾಸ್ತಿ ಹೊಂದಿರುವ ಬಗ್ಗೆ ಐಟಿ, ಇಡಿ, ಹಾಗೂ ಸಿಬಿಐ ಪ್ರತ್ಯೇಕವಾಗಿ ತನಿಖೆ ನಡೆಸಿ, ಕೆಲವು ಪ್ರಕರಣಗಳು ನ್ಯಾಯಾಲಯದ ಮೆಟ್ಟಿಲು ಹತ್ತಿದರೆ, ಮತ್ತೆ ಕೆಲವು ಪ್ರಕರಣಗಳು ತನಿಖಾ ಹಂತದಲ್ಲಿವೆ. ಆಸ್ತಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ಮಾಹಿತಿಯನ್ನು ಶಿವಕುಮಾರ್ ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ನೀಡಿಲ್ಲ. ಆದರೆ ಅವರ ಆದಾಯ ಮತ್ತು ಆಸ್ತಿಗೆ ಸಂಬಂಧಿಸಿದಂತೆ ಕೇಂದ್ರದ ಮೂರು ತನಿಖಾ ಸಂಸ್ಥೆಗಳ ಮುಂದೆ ದಾಖಲೆಗಳಿವೆ.

ಸಂಸ್ಥೆಗಳಲ್ಲಿರುವ ದಾಖಲೆ ಹಾಗೂ ಶಿವಕುಮಾರ್ ಸಲ್ಲಿಸಿರುವ ಅರ್ಜಿಯಲ್ಲಿ ವ್ಯತ್ಯಾಸಗಳು ಕಂಡು ಬಂದರೆ ಶಿವಕುಮಾರ್ ಅರ್ಜಿ ವಜಾಗೊಳ್ಳಲಿದೆ. ಶಿವಕುಮಾರ್ ವಿರುದ್ಧ ಕಣಕ್ಕಿಳಿದಿರುವ ಬಿಜೆಪಿಯ ಆರ್. ಅಶೋಕ್ ಮೇಲುಗೈ ಸಾಧಿಸಬಹುದು. ಇದನ್ನು ಗಮನದಲ್ಲಿಟ್ಟುಕೊಂಡೇ ತಮ್ಮ ಸಹೋದರನಿಂದ ನಾಮಪತ್ರ ಸಲ್ಲಿಸಿದ್ದಾರೆ.

# ರಾಣೇಬೆನ್ನೂರು ಬದಲಾವಣೆ ಬಯಸುತ್ತಿದೆ

ರಾಣೇಬೆನ್ನೂರು, ಏ. 20- ಇದುವರೆಗೂ ನಡೆದ ಆಡಳಿತ ಹೊರತುಪಡಿಸಿ, ಹೊಸ ಆಡಳಿತಕ್ಕಾಗಿ ರಾಣೇಬೆನ್ನೂರು ಜನತೆ ಕಾತುರರಾಗಿದ್ದು, ಬದಲಾವಣೆ ಬಯಸುತ್ತಿದ್ದಾರೆ ಎಂದು ಪಕ್ಷೇತರ ಅಭ್ಯರ್ಥಿ ಡಾ. ಮೋಹನ್ ಹಂಡೆ ಹೇಳಿದರು.

ಅವರು ಇಂದು ನಾಮಪತ್ರ ಸಲ್ಲಿಸಿದ ನಂತರ ತಮ್ಮ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ರಾಜಕಾರಣದಲ್ಲಿ ಸೇವೆ ಅಗ್ರ ಸ್ಥಾನದಲ್ಲಿರಬೇಕು. ವ್ಯವಹಾರ ಗೌಣವಾಗಿರಬೇಕು. ಈಗ ಸೇವೆ ಕಾಣೆಯಾಗಿ ವ್ಯವಹಾರ ಮುಂಚೂಣಿಗೆ ಬಂದಿದೆ. ಇದು ಭ್ರಷ್ಟಾಚಾರಕ್ಕೆ ಕಾರಣವಾಗಿದೆ. ಎಲ್ಲೆಡೆ ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂದು ಡಾ. ಹಂಡೆ ಹೇಳಿದರು.

ನನ್ನದು ರಾಜಕೀಯ ಕುಟುಂಬ. ನನ್ನಜ್ಜ ಪ್ರಾಮಾಣಿಕ ರಾಜಕಾರಣಿ. ನಾನೂ ಅವರಂತೆ ಪ್ರಾಮಾಣಿಕವಾಗಿ ಕ್ಷೇತ್ರದ ಜನರ ಸೇವೆ ಮಾಡುವ ಮಹದಾಸೆ ಇಟ್ಟುಕೊಂಡಿದ್ದೇನೆ ಎಂದರು.

ಬಡವರ, ದೀನ ದಲಿತರ ಮಹಾನ್ ನಾಯಕರಾಗಿದ್ದ ಬಂಗಾರಪ್ಪನವರ



**ಪಕ್ಷೇತರ ಅಭ್ಯರ್ಥಿ ಡಾ. ಮೋಹನ್ ಹಂಡೆ**

ಅನುಯಾಯಿಯಾಗಿ 1983ರಲ್ಲಿ ಕ್ರಾಂತಿ ರಂಗದಿಂದ ಜನತಾ ಪಕ್ಷಕ್ಕೆ ಬೆಂಬಲಿಸಿ, ನಂತರದಲ್ಲಿ ಮೂರು ಚುನಾವಣೆಗಳನ್ನು ಎದುರಿಸಿದ್ದೆನು. ದಶಕದ ನಂತರ ಬದಲಾವಣೆ ಬಯಸುತ್ತಿರುವ ರಾಣೇಬೆನ್ನೂರು ಜನತೆಯ ಆಶಯಗಳನ್ನು ಪೂರೈಸಲು ಸನ್ನದ್ಧನಾಗಿದ್ದು, ಜನತೆ ನನಗೆ ಸಂಪೂರ್ಣ ಬೆಂಬಲ ನೀಡುವ ನಂಬಿಕೆ ಇದೆ ಎಂದು ಡಾ. ಮೋಹನ್ ಹಂಡೆ ಹೇಳಿದರು.

ಕೆ.ಇ.ಬಿ. ಗಣೇಶ ದೇವಸ್ಥಾನದಿಂದ ತಮ್ಮ ಅಪಾರ ಬೆಂಬಲಿಗರೊಂದಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ತಹಶೀಲ್ದಾರ್ ಕಛೇರಿಯಲ್ಲಿ ಚುನಾವಣಾಧಿ ಕಾರಿಗೆ ನಾಮಪತ್ರ ಸಲ್ಲಿಸಿದ ಡಾ. ಹಂಡೆ ಜೊತೆ ಪತ್ನಿ ಸುಲೋಚನಾ ಹಂಡೆ, ಶಂಕರಗೌಡ ಗಂಗನಗೌಡ್ರ, ಮಾಲತೇಶ ಪಾಟೀಲ, ಸಿದ್ದಪ್ಪ ಅಡಿವೇರ ಮತ್ತಿತರರಿದ್ದರು.

## ಕಾಂಗ್ರೆಸ್‌ನ ರಘುಮೂರ್ತಿ ನಾಮಪತ್ರ




**ಚಳ್ಳಕೆರೆ**

ಚಳ್ಳಕೆರೆ, ಏ. 20- ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಟಿ. ರಘುಮೂರ್ತಿ ತೆರೆದ ವಾಹನದಲ್ಲಿ ಮೆರವಣಿಗೆ ಮೂಲಕ ತಾಲ್ಲೂಕು ಕಛೇರಿಗೆ ತೆರಳಿ ನಾಮಪತ್ರ ಸ್ಲಲಿಸಿದರು.

ತಾಲ್ಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ. ವೀರಭದ್ರಯ್ಯ, ತಾ.ಪಂ. ಸದಸ್ಯ ಸಿ.ಟಿ. ಶಿವಮೂರ್ತಿ, ತಾಲ್ಲೂಕು ವೀರಶೈವ ಸಮಾಜದ ಉಪಾಧ್ಯಕ್ಷ ಕೆ.ಎಂ. ಜಗದೀಶ್, ಜಿ. ಶ್ರೀನಿವಾಸ್, ಎಸ್.ಹೆಚ್. ಸೈಯದ್, ತಿಪ್ಪೇಸ್ವಾಮಿ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಜಗಳೂರು; ಜೆಡಿಎಸ್ ಅಭ್ಯರ್ಥಿ ನಾಮಪತ್ರ ಸಲ್ಲಿಕೆ



ಜಗಳೂರು, ಏ. 20- ವಿಧಾನಸಭಾ ಚುನಾವಣೆಗೆ ಜಾತ್ಯತೀತ ಜನತಾದಳ ಪಕ್ಷದ ಅಧಿಕೃತ ಅಭ್ಯರ್ಥಿಯಾಗಿ ಮಲ್ಲಾಪುರ ಗ್ರಾಮದ ದೇವರಾಜ್ ನಾಮಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಬಿ. ಕಲ್ಲೇರುದ್ರೇಶ್, ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಉಸ್ಮಾನ್ ಅಲಿ, ಪಪಂ ಸದಸ್ಯ ಲುಕ್ಮಾನ್ ಮುಂತಾದವರು ಇದ್ದರು.

ಜಗಳೂರು ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಗಳಾಗಿ ಇಂದು ಡಿ. ತಿಪ್ಪೇಸ್ವಾಮಿ ಬಸಪ್ಪನಹಟ್ಟಿ, ಜಿ.ಎನ್ ಭೀಮಪ್ಪ ಹಿರೇಬನ್ನಿಹಟ್ಟಿ, ಓ. ದಿವಾಕರ್ ಜಗಳೂರು, ಕೆ.ಆರ್. ರಾಘವೇಂದ್ರ ಅಸಗೋಡು, ಎಂ. ನಾಗರಾಜು ಜಗಳೂರು ಇವರು ನಾಮಪತ್ರ ಸಲ್ಲಿಸಿದರೆ, ಜಿ. ಸ್ವಾಮಿ ಬಸವನಗಿರಿ ಸಮಾಜವಾದಿ ಪಾರ್ಟಿ ಹಾಗೂ ಪಿ ಅಜ್ಜಯ್ಯ ಉತ್ತಮ ಲೋಕಶಕ್ತಿ ಪಕ್ಷ ದಿಂದ ನಾಮಪತ್ರ ಸಲ್ಲಿಸಿದರು.

# ಏಳು ಕ್ಷೇತ್ರ, 115 ಅಭ್ಯರ್ಥಿಗಳು, 164 ನಾಮಪತ್ರ

**(1ನೇ ಪುಟದಿಂದ)** ಕಾಂಗ್ರೆಸ್ 2 ನಾಮಪತ್ರ, ಜೆ.ಅಮಾನುಲ್ಲಾ ಖಾನ್ ಜೆಡಿಎಸ್, ಮೊಹಮದ್ ರಿಯಾಜ್ ಸಾಬ್ ಸೋಷಿಯಲ್ ಡೆಮಾಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾ, ಸಾಜಿದ್ ಆಮ್ ಆದ್ಮಿ ಪಾರ್ಟಿ, ಎಂ.ಬಿ. ಪ್ರಕಾಶ್, ಎಸ್.ಕೆ.ಅಫಜಲ್ ಖಾನ್, ಜಿ.ಆರ್. ಶಿವಕುಮಾರಸ್ವಾಮಿ, ದಿಲ್ ಜಾನ್ ಖಾನ್, ಶೇಖ್ ಅಹಮದ್, ಎಂ.ರಾಜಾಸಾಬ್ ಪಕ್ಷೇತರರಾಗಿ ನಾಮಪತ್ರ ಸಲ್ಲಿಸಿದ್ದಾರೆ.

ಮಾಯಕೊಂಡ ಕ್ಷೇತ್ರಕ್ಕಾಗಿ ಕೆ.ಎಸ್. ಬಸವರಾಜ್ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಕೆ.ಶೇಖರನಾಯ್ಕ ಕರ್ನಾಟಕ ರಾಜ್ಯ ರೈತ ಸಂಘ, ಜಿ.ಎಸ್.ಶ್ಯಾಮ್ ಬಿಜೆಪಿ, ಎಂ. ಬಸವರಾಜನಾಯ್ಕ ಬಿಜೆಪಿ, ಅಜ್ಜಪ್ಪ ಎನ್. ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ, ಧರ್ಮನಾಯ್ಕ ಆಮ್ ಆದ್ಮಿ ಪಾರ್ಟಿ, ಹೆಚ್. ಆನಂದಪ್ಪ ಜೆಡಿಎಸ್, ಆರ್.ಯಶೋಧ ಬಿ. ಎಸ್.ಪಿ, ಜಿ.ಎಸ್.ಶ್ಯಾಮ್, ಶ್ರೀಧರ ಎನ್, ಶಿವಾನಂದ ಆರ್, ಕೆ.ಹೆಚ್.ವೆಂಕಟೇಶ್, ಪುಷ್ಪ ಬಿ.ಎಂ, ಪೆದ್ದಪ್ಪ.ಎಸ್, ರೇವ್ಯನಾಯ್ಕ ಸಿ ಪಕ್ಷೇತರ,

**7 ಕ್ಷೇತ್ರಗಳ ಪೈಕಿ ಅತಿ ಹೆಚ್ಚು ನಾಮಪತ್ರ ಸಲ್ಲಿಕೆಯಾದ ಕ್ಷೇತ್ರ ಮಾಯಕೊಂಡ. ಇಲ್ಲಿ 24 ಅಭ್ಯರ್ಥಿಗಳಿಂದ 38 ನಾಮಪತ್ರಗಳು ಸಲ್ಲಿಕೆಯಾಗಿವೆ. ಅತಿ ಕಡಿಮೆ ನಾಮಪತ್ರಗಳು ಜಗಳೂರು ಕ್ಷೇತ್ರದಲ್ಲಿ ಸಲ್ಲಿಕೆಯಾಗಿದ್ದು, 12 ಅಭ್ಯರ್ಥಿಗಳು 15 ನಾಮಪತ್ರ ಸಲ್ಲಿಸಿದ್ದಾರೆ.**

ಚನ್ನಗಿರಿ ಕ್ಷೇತ್ರಕ್ಕೆ ಟಿ.ವಿ.ಪಟೇಲ್ ಜೆಡಿಎಸ್, ಎಂ.ರೂಪ ಕಲ್ಯಾಣ ರಾಜ್ಯ ಪ್ರಗತಿ ಪಕ್ಷ, ಶಂಕರ್ ಶಾಮನೂರ ಐರಾ ನ್ಯಾಷನಲ್ ಪಾರ್ಟಿ, ಆದಿಲ್ ಖಾನ್ ಎಸ್.ಕೆ. ಆಮ್ ಆದ್ಮಿ ಪಾರ್ಟಿ, ಕೆ.ಶಿವಲಿಂಗಪ್ಪ, ಎಂ.ವಿ. ಮಲ್ಲಿಕಾರ್ಜುನ, ರಂಗನಾಥ ಬಿ ಪಕ್ಷೇತರದಿಂದ ನಾಮಪತ್ರ ಸಲ್ಲಿಸಿದರು.

ಹೊನ್ನಾಳಿ ಕ್ಷೇತ್ರದಿಂದ ಎಂ.ಪಿ. ರೇಣುಕಾಚಾರ್ಯ ಬಿಜೆಪಿ, ಬಿ.ಜಿ.ಶಿವಮೂರ್ತಿ ಜೆಡಿಎಸ್ 2, ಕೃಷ್ಣಪ್ಪ ಬಿಎಸ್‌ಪಿ 2, ನರಸಿಂಹಪ್ಪ ಕೆ. ಆಮ್ ಆದ್ಮಿ ಪಾರ್ಟಿ, ರಂಗನಾಥಸ್ವಾಮಿ ಎಂ., ಲಕ್ಷ್ಮೀಕಾಂತ ಹೆಚ್. ಟಿ, ವಾಸಪ್ಪ ಪಕ್ಷೇತರರಾಗಿ ನಾಮಪತ್ರ ಸಲ್ಲಿಸಿದ್ದಾರೆ.

## ಕ್ರಮ ತಡೆಯಲು ಹೈಕೋರ್ಟ್ ನಕಾರ

**(1ನೇ ಪುಟದಿಂದ)** 2020ರಂದು ಎಫ್.ಐ.ಆರ್. ದಾಖಲಿಸಲಾಗಿತ್ತು. ತಮ್ಮ ವಿರುದ್ಧ ದೋಷಾರೋಪಕ್ಕೆ ಅನುಮತಿ ನೀಡಿದ್ದು ಹಾಗೂ ಎಫ್.ಐ.ಆರ್. ದಾಖಲಿಸಿದ್ದನ್ನು ಪ್ರಶ್ನಿಸಿ ಶಿವಕುಮಾರ್ ಹೈಕೋರ್ಟ್‌ನಲ್ಲಿ ಪ್ರತ್ಯೇಕ ಅರ್ಜಿಗಳನ್ನು ದಾಖಲಿಸಿದ್ದರು. ಎಫ್.ಐ.ಆರ್. ದಾಖಲಿಸಿರುವುದನ್ನು ಪ್ರಶ್ನಿಸಿರುವ ವಿಚಾರಣೆಯನ್ನು ಮೇ 30ಕ್ಕೆ ನಿಗದಿ ಪಡಿಸಲಾಗಿದೆ. ಆದಾಯ ತೆರಿಗೆ ಇಲಾಖೆಯು 2017ರಲ್ಲಿ ಶಿವಕುಮಾರ್ ನಿವಾಸಗಳ ಮೇಲೆ ದಾಳಿ ನಡೆಸಿತ್ತು. ಇದರಿಂದ ಉದ್ಭವಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿ.ಬಿ.ಐ. ಕ್ರಮ ತೆಗೆದುಕೊಳ್ಳುತ್ತಿದೆ.

## ದಾಖಲೆಯಿಲ್ಲದ 49 ಕೆಜಿ ಬಂಗಾರ ವಶ

ಬೆಂಗಳೂರು, ಏ. 20 - ದಾಖಲೆಯಿಲ್ಲದೆ ಸಾಗಾಟ ಮಾಡಲಾಗುತ್ತಿದ್ದ 49 ಕೆ.ಜಿ. ಚಿನ್ನಾಭರಣ ಹಾಗೂ 66 ಕೆ.ಜಿ ಬೆಳ್ಳಿ ಸಾಮಗ್ರಿಗಳನ್ನು ತರೀಕೆರೆ, ಬೆಂಗಳೂರು ಮತ್ತು ಹಿರಿಯೂರು ಬಳಿ ಜಪ್ತಿ ಮಾಡಲಾಗಿದೆ. ತರೀಕೆರೆ ಸಮೀಪದ ಎಂ.ಸಿ.ಹಳ್ಳಿ ಚೆಕ್‌ಪೋಸ್ಟ್‌ನಲ್ಲಿ ವಾಹನವೊಂದರಲ್ಲಿ ಸಾಗಿಸುತ್ತಿದ್ದ 40.5 ಕೆ.ಜಿ ಚಿನ್ನ, 20 ಕೆ.ಜಿ ಬೆಳ್ಳಿ ಒಡವೆಗಳನ್ನು ಮಂಗಳವಾರ ರಾತ್ರಿ ವಶಪಡಿಸಿಕೊಳ್ಳಲಾಗಿದೆ.



## ರಾಣೇಬೆನ್ನೂರು ಚುನಾವಣೆ ವೀಕ್ಷಕರಾಗಿ ರಾಬರ್ಟ್ ಸಿಂಗ್

ರಾಣೇಬೆನ್ನೂರು, ಏ. 20- ರಾಣೇಬೆನ್ನೂರು ಹಾಗೂ ಹಿರೇಕೆರೂರು ವಿದಾನಸಭೆ ಚುನಾವಣೆ ವೀಕ್ಷಕರಾಗಿ ರಾಬರ್ಟ್ ಸಿಂಗ್ (91410 34086) ಅವರು ನೇಮಕಗೊಂಡಿದ್ದಾರೆ.

## ಬಿಕ್ಕಟ್ಟು : ಲಂಕಾದಿಂದ ಲಕ್ಷ ಕೋತಿ ರಫ್ತು

**(1ನೇ ಪುಟದಿಂದ)** ನಿಷೇಧ ಹೇರಿದೆ. ಆದರೆ, ಹಣಕಾಸು ಬಿಕ್ಕಟ್ಟು ಹೆಚ್ಚಾಗುತ್ತಿರುವ ನಡುವೆಯೇ, ರಫ್ತಿನ ನಿರ್ಧಾರಕ್ಕೆ ಬರಲಾಗಿದೆ. ಈ ವರ್ಷ ಹಲವಾರು ಪ್ರಾಣಿಗಳನ್ನು ರಕ್ಷಿತ ಪಟ್ಟಿಯಿಂದ ತೆಗೆದು ಹಾಕಲಾಗಿದೆ. ನವಿಲು ಹಾಗೂ ಕಾಡು ಹಂದಿ ರೀತಿಯ ಪ್ರಾಣಿಗಳನ್ನು ರೈತರು ಕೊಲ್ಲಲು ಅವಕಾಶ ನೀಡಲಾಗಿದೆ. ಟೋಕ್ ಮಕಾಕ್ ಕೋತಿಗಳು ಶ್ರೀಲಂಕಾದ ಹಲವೆಡೆ ಬೆಳೆ ಹಾನಿ ಮಾಡುತ್ತಿವೆ. ಕೆಲವೊಮ್ಮೆ ಜನರ ಮೇಲೂ ದಾಳಿ ನಡೆಸುತ್ತಿವೆ. ಈ ಕೋತಿಗಳ ಪ್ರಮಾಣವನ್ನು 20 ರಿಂದ 30 ಲಕ್ಷಕ್ಕೆ ಸೀಮಿತಗೊಳಿಸಲು ಲಂಕಾ ಅಧಿಕಾರಿಗಳು ನಿರ್ಧರಿಸಿದ್ದಾರೆ.

## ಹತ್ಯೆ : 67 ಆರೋಪಿಗಳೂ ಖುಲಾಸೆ

**(1ನೇ ಪುಟದಿಂದ)** ಕೊಡ್ನಾನಿಗೆ ವಿಚಾರಣಾ ನ್ಯಾಯಾಲಯ 28 ವರ್ಷಗಳ ಜೈಲು ಶಿಕ್ಷೆ ವಿಧಿಸಿತ್ತು. ಹೈಕೋರ್ಟ್‌ನಲ್ಲಿ ನಡೆದ ವಿಚಾರಣೆಯಲ್ಲಿ ಅವರು ಖುಲಾಸೆಗೊಂಡಿದ್ದರು. ನರೋಡಾ ಗಾಮ್ ಸೇರಿದಂತೆ 9 ಪ್ರಮುಖ ಗಲಭೆಗಳ ತನಿಖೆಯನ್ನು ಸುಪ್ರೀಂ ಕೋರ್ಟ್‌ನಿಂದ ನೇಮಕಗೊಂಡ ವಿಶೇಷ ತನಿಖಾ ತಂಡ ನಿರ್ವಹಿಸಿದೆ. ಇವುಗಳ ವಿಚಾರಣೆ ವಿಶೇಷ ನ್ಯಾಯಾಲಯಗಳಲ್ಲಿ ನಡೆಯುತ್ತಿದೆ.

# ನಾಮಪತ್ರ ಪ್ರಕ್ರಿಯೆ ನಂತರ ಪ್ರಚಾರಕ್ಕೆ ಮೋದಿ

ಬೆಂಗಳೂರು, ಏ. 20 - ನಾಮಪತ್ರ ಪ್ರಕ್ರಿಯೆ ಮುಗಿದ ನಂತರ ಪ್ರಧಾನಿ ನರೇಂದ್ರ ಮೋದಿಯವರು ಪ್ರಚಾರಕ್ಕೆ ಬರಲಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,ಲಿಂಗಾಯತ ಮುಖ್ಯಮಂತ್ರಿ ಘೋಷಣೆ ಬಗ್ಗೆ ಯಾವುದೇ ನಿರ್ಣಯ ಆಗಿಲ್ಲ ಎಂದರು.

ಯಡಿಯೂರಪ್ಪ ನೇತೃತ್ವದಲ್ಲಿ ಲಿಂಗಾಯತ ನಾಯಕರ ಸಭೆ ನಡೆಸಿ, ಸದ್ಯದ ರಾಜಕೀಯ ಸ್ಥಿತಿಗತಿಗಳ ಬಗ್ಗೆ ಚರ್ಚೆ ಆಗಿದೆ. ಕಾಂಗ್ರೆಸ್‌ನವರ ಅಪಪ್ರಚಾರಕ್ಕೆ ಹೇಗೆ ಪ್ರತ್ಯುತ್ತರ ನೀಡಬೇಕು, ಲಿಂಗಾಯತ ಮುಖ್ಯಮಂತ್ರಿ ಬಗ್ಗೆಯೂ ಕೆಲವರು ಸಲಹೆ ಕೊಟ್ಟಿದ್ದಾರೆ. ಸಭೆಯಲ್ಲಿ ಧರ್ಮೇಂದ್ರ ಪ್ರಧಾನ್ ಅವರೂ ಇದ್ದರು. ಸಭೆಯಲ್ಲಿ ವ್ಯಕ್ತವಾಗಿರುವ ಭಾವನೆಗಳನ್ನು ವರಿಷ್ಠರಿಗೆ

**ಲಿಂಗಾಯತ ಸಿಎಂ ಘೋಷಣೆ ಬಗ್ಗೆ ನಿರ್ಣಯ ಆಗಿಲ್ಲ - ಬೊಮ್ಮಾಯಿ**

ತಿಳಿಸುವುದಾಗಿ ಹೇಳಿದ್ದಾರೆ ಎಂದರು.

ಅಶೋಕ್ ಅವರಿಗೆ ಕನಕಪುರದಲ್ಲಿ ಮಿಲಿಟರಿ ಹೋಟೆಲ್‌ಗೆ ಬಂದು ಹೋಗಿ ಎಂಬ ಡಿ.ಕೆ.ಶಿವಕುಮಾರ್ ಅವರ ಹೇಳಿಕೆ ಬಗ್ಗೆ ಉತ್ತರಿಸಿ, ನಮ್ಮ ಪ್ರಚಾರ ಮಿಲಿಟರಿ ಹೋಟೆಲ್‌ನಿಂದಲೇ ಆರಂಭವಾಗಲಿದೆ ಎಂದರು.

ಅಲ್ಲಿ ಸ್ಥಳೀಯ ಸಾಮಾನ್ಯ ಜನರಿರುತ್ತಾರೆ. ಅಂಥ ಸಾಮಾನ್ಯ ಜನರನ್ನು ಡಿಕೆಶಿ ಭೇಟಿ ಮಾಡುವುದಿಲ್ಲ. ಸಾಮಾನ್ಯ ಜನರನ್ನು ಭೇಟಿ ಮಾಡಲು ಅಶೋಕ್ ತೆರಳಲಿದ್ದಾರೆ. ಇದರಲ್ಲಿ ತಪ್ಪೇನಿದೆ. ಮಿಲಿಟರಿ ಹೋಟೆಲ್‌ಗೆ ಯಾಕೆ ಹೋಗಬಾರದು? ಎಂದು ಪ್ರಶ್ನಿಸಿದರು.

**ಕಾಂಗ್ರೆಸ್‌ನದ್ದು ಲಿಂಗಾಯತ ವಿರೋಧಿ ನಡೆ, 50 ವರ್ಷಗಳಲ್ಲಿ ಒಬ್ಬ ಲಿಂಗಾಯತರನ್ನು ಸಿಎಂ ಮಾಡಿಲ್ಲ**

ಕಾಂಗ್ರೆಸ್‌ನದ್ದು ಲಿಂಗಾಯತ ವಿರೋಧಿ ನಡೆ, 1967 ರಿಂದ ಈ ವರೆಗೆ 50 ವರ್ಷಗಳಲ್ಲಿ ಒಬ್ಬ ಲಿಂಗಾಯತರನ್ನು ಕಾಂಗ್ರೆಸ್ ಮುಖ್ಯಮಂತ್ರಿಯನ್ನಾಗಿ ಮಾಡಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟೀಕಿಸಿದ್ದಾರೆ.

ಮಧ್ಯೆ ವೀರೇಂದ್ರ ಪಾಟೀಲರು ಒಂಭತ್ತು ತಿಂಗಳು ಮುಖ್ಯಮಂತ್ರಿಗಳಾಗಿದ್ದರೂ, ಪಾಟೀಲರನ್ನು ಕಾಂಗ್ರೆಸ್ ಸರಿಯಾಗಿ ನಡೆಸಿಕೊಳ್ಳಲಿಲ್ಲ. ವಿಮಾನ ನಿಲ್ದಾಣದಲ್ಲಿಯೇ ಅವರನ್ನು ತೆಗೆದು ಹಾಕಲಾಗಿದೆ ಎಂದರು.

ರಾಜಶೇಖರ ಮೂರ್ತಿಯವರನ್ನು ನಡೆಸಿಕೊಂಡ ರೀತಿಯೂ ಸರಿಯಿಲ್ಲ, ಲಿಂಗಾಯತ ಧರ್ಮವನ್ನು ಒಡೆಯಲು ಕಾಂಗ್ರೆಸ್ ಪ್ರಯತ್ನಿಸಿತ್ತು. ಮತ ಬ್ಯಾಂಕ್‌ಗಾಗಿ ಧರ್ಮ ಒಡೆಯಲು ಹೋಗಿದ್ದನ್ನು ಜನ ಮರೆಯಲ್ಲ ಎಂದರು.

ಕಾಂಗ್ರೆಸ್‌ನವರು ದಲಿತರು, ಹಿಂದುಳಿದವರು, ಲಿಂಗಾಯತರಿಗೆ ಮೋಸ ಮಾಡಿದ್ದಾರೆ ಎಂದು ಆರೋಪಿಸಿದರು.

# ಹರಿಹರದ ಕಾಂಗ್ರೆಸ್ ಅಭ್ಯರ್ಥಿ ಶ್ರೀನಿವಾಸ್ ನಾಮಪತ್ರ ಸಲ್ಲಿಕೆ



ಹರಿಹರ, ಏ. 20- ಹರಿಹರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ನಂದಿಗಾವಿ ಎನ್.ಹೆಚ್. ಶ್ರೀನಿವಾಸ್ ತಮ್ಮ ಅಪಾರ ಬೆಂಬಲಿಗರೊಂದಿಗೆ, ಬೃಹತ್ ಮೆರವಣಿಗೆ ಮೂಲಕ ತಹಶೀಲ್ದಾರ್ ಕಚೇರಿಗೆ ತೆರಳಿ ನಾಮಪತ್ರ ಸಲ್ಲಿಸಿದರು.

ನಗರದ ಗ್ರಾಮದೇವತೆ ಊರಮ್ಮ ದೇವಿ, ಹರಿಹರೇಶ್ವರ ಸ್ವಾಮಿ ಮತ್ತು ದರ್ಗಾಕ್ಕೆ ಭೇಟಿ ಕೊಟ್ಟು ವಿಶೇಷ ಪೂಜೆ ಸಲ್ಲಿಸಿದರು. ಎಪಿಎಂಸಿ ಆವರಣದಿಂದ ಪ್ರಾರಂಭಗೊಂಡ ಮೆರವಣಿಗೆ ಶಿವಮೊಗ್ಗ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಮುಖ್ಯರಸ್ತೆ ಮೂಲಕ ಸಂಚರಿಸಿ ತಹಶೀಲ್ದಾರ್ ಕಚೇರಿಯ ಆವರಣಕ್ಕೆ ಅಂತ್ಯಗೊಂಡಿತು.

ಟಿಕೆಟ್ ಆಕಾಂಕ್ಷಿತರಾಗಿದ್ದ ಹಾಲಿ ಶಾಸಕ ಎಸ್. ರಾಮಪ್ಪ, ದಿಟೂರು ಮಹೇಶ್ವರಪ್ಪ, ಎಂ. ನಾಗೇಂದ್ರಪ್ಪ ವಕೀಲರು, ಗೋವಿಂದ ರೆಡ್ಡಿ, ಮತ್ತು ಕೆ. ಪಿ.ಸಿ.ಸಿ.ಸದಸ್ಯ ಬಿ. ರೇವಣಸಿದ್ದಪ್ಪ, ಸಿ. ಎನ್. ಹುಲುಗೇಶ್, ನಗರಸಭೆ ಸದಸ್ಯ ಎಸ್.ಎಂ. ವಸಂತ್ ಸೇರಿದಂತೆ ಹಲವಾರು ಪ್ರಮುಖ ನಾಯಕರು ಮೆರವಣಿಗೆಯಲ್ಲಿ ಭಾಗವಹಿಸಿರಲಿಲ್ಲ.


ಕಾಂಗ್ರೆಸ್ ಪಕ್ಷದ ಜಿಲ್ಲಾ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಮೆರವಣಿಗೆಗೆ ಆಗಮಿಸಿ ಸ್ವಲ್ಪ ಸಮಯ ಇದ್ದು, ನಂತರ ವಾಪಸ್ ತೆರಳಿದರು ಮತ್ತು ಯಾರೂ ನಿರೀಕ್ಷೆ ಕೂಡ ಮಾಡಿರದ ಮಾಜಿ ಸಚಿವ ದಿ. ಡಾ. ವೈ. ನಾಗಪ್ಪ ನವರ ಪುತ್ರ ವೈ.ಎನ್. ಮಹೇಶ್ ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಮೂಲಕ ಅಚ್ಚರಿ ಮೂಡಿಸಿದರು.

ಈ ವೇಳೆ ಮಾತನಾಡಿದ ನಂದಿಗಾವಿ ಶ್ರೀನಿವಾಸ್, ನನಗೆ ಗೆಲ್ಲುವ ವಿಶ್ವಾಸ ಇದೆ. ನಾನು ಗೆದ್ದ ನಂತರ ರಾಜ್ಯಕ್ಕೆ ಮಾದರಿ ತಾಲ್ಲೂಕು ಆಗುವಂತಹ ನಿಟ್ಟಿನಲ್ಲಿ ಶ್ರಮವಹಿಸಿ ಕೆಲಸ ಮಾಡುವುದಾಗಿ ಹೇಳಿದರು.

ಅಲ್ಲದೇ ಶಾಸಕ ರಾಮಪ್ಪನವರು ಬರುತ್ತಾರೆ ಎಂಬ ಆಶಾಭಾವನೆ ಹೊಂದಿದ್ದೆ. ಆದರೆ ಅವರು ಇನ್ನೂ ಬೆಂಗಳೂರಿನಲ್ಲಿ ಇರುವುದರಿಂದ ಮೆರವಣಿಗೆಯಲ್ಲಿ ಪಾಲ್ಗೊಳ್ಳಲು ಆಗಿರುವುದಿಲ್ಲ ಮತ್ತು ಅಸಮಾಧಾನ ಹೊಂದಿರುವ ಎಂ. ನಾಗೇಂದ್ರಪ್ಪ ವಕೀಲರು, ದೀಟೂರು ಮಹೇಶ್ವರಪ್ಪ ಮತ್ತು ಹಲವು ಆಕಾಂಕ್ಷಿತರನ್ನು ಕೂಡ ನಾನು ಮನವೊಲಿಸಲು ಪ್ರಯತ್ನ ಮಾಡಿರುವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ಶಂಕರ್ ಖಟಾವ್‌ಕರ್, ಪಕ್ಕೀರಮ್ಮ ಹುಲಿಕಟ್ಟಿ, ಸುಮಿತ್ರ, ಬಾಬುಲಾಲ್, ಕೆ.ಜಿ. ಸಿದ್ದೇಶ್, ದಾದಾಪೀರ್ ಭಾನುವಳ್ಳಿ, ನಗರಸಭೆ ಮಾಜಿ ಸದಸ್ಯ ಕೃಷ್ಣ ಸಾ ಭೂತೆ ಇತರರು ಹಾಜರಿದ್ದರು.

## ಶ್ರೀ ಹೆಚ್.ಡಿ. ಚಂದ್ರಶೇಖರ್ ನಿಧನ



ದಾವಣಗೆರೆ ನಿಟ್ಟುವಳ್ಳಿ ವಾಸಿ ಹೆಚ್.ಡಿ. ಚಂದ್ರಶೇಖರ್ (46) ಅವರು ದಿನಾಂಕ : 20.04.2023 ರ ಗುರುವಾರ 6 ಗಂಟೆಗೆ ನಿಧನರಾದರು. ಪತ್ನಿ, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯ ಕ್ರಿಯೆಯನ್ನು ದಿನಾಂಕ 21.04.2023 ರಂದು ಬೃಂದಾವನದಲ್ಲಿ ಬೆಳಿಗ್ಗೆ 11 ಗಂಟೆಗೆ ನೆರವೇರಿಸಲಾಗುವುದು.


# ಬಿಜೆಪಿ ಅಭ್ಯರ್ಥಿ ರೇಣುಕಾಚಾರ್ಯ ನಾಮಪತ್ರ ಸಲ್ಲಿಕೆ

ಹೊನ್ನಾಳಿ,ಏ. 20- ಹೊನ್ನಾಳಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಂ.ಪಿ.ರೇಣುಕಾಚಾರ್ಯ ಅವರು ಇಂದು ಬೃಹತ್ ಮೆರವಣಿಗೆ ಮೂಲಕ ತೆರಳಿ ಚುನಾವಣಾಧಿಕಾರಿಗೆ ನಾಮಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಂಸದ ಜಿ.ಎಂ.ಸಿದ್ದೇಶ್ವರ ಅವರು, ಜಿಲ್ಲೆಯಲ್ಲಿ ಬಿಜೆಪಿ ಪಕ್ಷದ ಅಭ್ಯರ್ಥಿಗಳು ಎಲ್ಲಾ 7 ಸ್ಥಾನಗಳನ್ನು ಗೆಲ್ಲುತ್ತಾರೆ. ಜೊತೆಗೆ ಹರಪನಹಳ್ಳಿ ಬಿಜೆಪಿ ಅಭ್ಯರ್ಥಿಯೂ ಗೆಲ್ಲುತ್ತಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ರೇಣುಕಾಚಾರ್ಯ ಅವರು 50 ಸಾವಿರಕ್ಕೂ ಹೆಚ್ಚು ಮತಗಳಿಂದ ವಿಜಯಶಾಲಿಗಳಾಗುತ್ತಾರೆ ಎಂದು ಅವರು ಹೇಳಿದರು.

ಎಂ.ಪಿ. ರೇಣುಕಾಚಾರ್ಯ ಮಾತನಾಡಿ, ನನ್ನ ಗೆಲುವಿಗೆ ಇಲ್ಲಿ ಸೇರಿರುವ ಜನರೇ ಸಾಕ್ಷಿ. ನಾನೊಬ್ಬ




**ಹೊನ್ನಾಳಿ**

ಸಾಮಾನ್ಯ ಕಾರ್ಯಕರ್ತ ಹೊನ್ನಾಳಿ -ನ್ಯಾಮತಿ ತಾಲ್ಲೂಕುಗಳ ಮತದಾರರು ನನ್ನನ್ನು ಮೂರು ಬಾರಿ ಗೆಲ್ಲಿಸಿದ್ದಾರೆ. ನಾಮಪತ್ರ ಸಲ್ಲಿಸುವಲ್ಲಿ ಸೇರಿರುವ ಜನಸ್ತೋಮ ನೋಡಿದರೆ ಇದು ವಿಜಯೋತ್ಸವ ಆಗಿದೆ. ತೋಡಿದ ಬಾವಿಗೆ ಜಲವೇ ಸಾಕ್ಷಿ ಎಂಬಂತೆ ಇದು ವಿಜಯೋತ್ಸವದ ಸಂಕೇತವಾಗಿದೆ. ನಾನೊಬ್ಬ ಸೇವಕನಾಗಿ ಕೆಲಸ ಮಾಡುತ್ತೇನೆ. ಕ್ಷೇತ್ರದ ಜನರು ನನ್ನ ಬಗ್ಗೆ ವಿಶ್ವಾಸವಿಟ್ಟು ಮತ ಹಾಕುತ್ತಾರೆ ಎಂದು ಹೇಳಿದರು.

# ಅಪಾರ ಕಾರ್ಯಕರ್ತರೊಂದಿಗೆ ಮೆರವಣಿಗೆ ನಾಗರಾಜ್ ಲೋಕಿಕೆರೆ ನಾಮಪತ್ರ ಸಲ್ಲಿಕೆ



ದಾವಣಗೆರೆ, ಏ. 20- ವಿಧಾನ ಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸಲು ಕೊನೆಯ ದಿನವಾದ ಇಂದು ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅಪಾರ ಕಾರ್ಯಕರ್ತರೊಂದಿಗೆ ಮೆರವಣಿಗೆ ನಡೆಸಿ, ನಾಮಪತ್ರ ಸಲ್ಲಿಸಿದರು.

ನಿಟ್ಟುವಳ್ಳಿಯ ಶ್ರೀ ದುರ್ಗಾಂಬಿಕಾ ದೇವಿಗೆ ಪೂಜೆ ಸಲ್ಲಿಸಿ, ತೆರೆದ ವಾಹನದಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳೊಂದಿಗೆ ಮೆರವಣಿಗೆ ಮೂಲಕ ಪಾಲಿಕೆ ಕಾರ್ಯಾಲಯಕ್ಕೆ ಆಗಮಿಸಿದರು.

ಮೆರವಣಿಗೆಯು ಹೆಚ್.ಕೆ.ಆರ್. ವೃತ್ತ, ಕೆಟಿಜೆ ನಗರ ಪೊಲೀಸ್ ಠಾಣೆ ವೃತ್ತ, ಕೆಟಿಜೆ ನಗರದ 2ನೇ ಅಡ್ಡ ರಸ್ತೆ, ಶಿವಪ್ಪಯ್ಯ ಸರ್ಕಲ್, ಅಂಬೇಡ್ಕರ್ ಸರ್ಕಲ್, ಜಯದೇವ ಸರ್ಕಲ್, ಪಿ.ಬಿ. ರಸ್ತೆಯ ಮೂಲಕ ಪಾಲಿಕೆವರೆಗೆ ಸಾಗಿತು.

ಮೆರವಣಿಗೆಯಲ್ಲಿ ಕಾರ್ಯಕರ್ತರು ಉತ್ಸಾಹದಿಂದ ಭಾಗವಹಿಸಿ, ಅಭ್ಯರ್ಥಿ ನಾಗರಾಜ ಲೋಕಿಕೆರೆ ಅವರ ಗೆಲುವಿಗೆ ಜೈಕಾರ, ಘೋಷಣೆ ಕೂಗಿದರು. ಪ್ರಮುಖ ವೃತ್ತಗಳಲ್ಲಿ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಮೆರೆವಣಿಗೆಯಲ್ಲಿ ಆಂಜನೇಯ ವೇಷಧಾರಿಗಳಿದ್ದರು. ಯುವಕರು ಮೋದಿ ಮುಖವಾಡ ಧರಿಸಿದ್ದರು. ಹರಿಹರದ ಹರೀಶ್ ಎಂಬ ಯುವಕ ದೇಹದ ಮೇಲೆ ಬಿಜೆಪಿ ಚಿಹ್ನೆ, ಅಭ್ಯರ್ಥಿ ಹೆಸರು ಬರೆದುಕೊಂಡು ಗಮನ ಸೆಳೆದ.

ಮೆರವಣಿಗೆಯಲ್ಲಿ ಮಹಿಳೆಯರಿಗಾಗಿಯೇ ಪ್ರತ್ಯೇಕ ವಾಹನ ಮೀಸಲಿಡಲಾಗಿತ್ತು. ಲೋಕಿಕೆರೆ ನಾಗರಾಜ್ ಪತ್ನಿ ಲತಾ ನಾಗರಾಜ್ ಲೋಕಿಕೆರೆ, ಪಾಲಿಕೆ ಸದಸ್ಯೆಯರಾದ ಉಮಾ ಪ್ರಕಾಶ್, ಹೆಚ್.ಸಿ. ಜಯಮ್ಮ, ಬಿಜೆಪಿ ಜಿಲ್ಲಾ ಮಹಿಳಾ ಅಧ್ಯಕ್ಷ ಮಂಜುಳಾ ಮಹೇಶ್ ಮತ್ತಿತರರಿದ್ದರು. ದೇವಸ್ಥಾನದ ಬಳಿ ಮಹಿಳಾ ಕಾರ್ಯಕರ್ತೆಯರು ನೃತ್ಯ ಮಾಡಿ ಸಂಭ್ರಮಿಸಿದರು.

ದೇವಸ್ಥಾನದ ಬಳಿ ಸಂಸದ ಜಿ.ಎಂ. ಸಿದ್ದೇಶ್ವರ ಆಗಮಿಸಿ ನಾಗರಾಜ ಲೋಕಿಕೆರೆ ಅವರಿಗೆ ಶುಭ ಕೋರಿದರು. ದೂಡಾ ಮಾಜಿ ಅಧ್ಯಕ್ಷ ದೇವರಮನೆ ಶಿವಕುಮಾರ್, ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ ಹನಗವಾಡಿ, ದೂಡಾ ಅಧ್ಯಕ್ಷ ಎ.ವೈ. ಪ್ರಕಾಶ್, ಮುಖಂಡರಾದ ಬಿ.ಎಸ್. ಜಗದೀಶ್, ಪಾಲಿಕೆ ಸದಸ್ಯರಾದ ಎಸ್.ಟಿ ವೀರೇಶ್, ಪ್ರಸನ್ನ ಕುಮಾರ್, ಕೆ.ಎಂ. ಸುರೇಶ್, ಜೆ.ಎನ್. ಶ್ರೀನಿವಾಸ್, ಮುಖಂಡರಾದ ಎನ್ ರಾಜಶೇಖರ್, ಪಿ.ಸಿ. ಶ್ರೀನಿವಾಸ್, ಎನ್.ಎ. ಮುರುಗೇಶ್, ಶ್ರೀನಿವಾಸ್ ದಾಸಕರಿಯಪ್ಪ, ಸಂಗನಗೌಡ್ರು, ಧನಂಜಯ್ ಕಡ್ಲೆಬಾಳು, ಜೊಳ್ಳಿ ಗುರು, ಕುಮಾರ್ ಇನ್ನಿತರರು ನಾಗರಾಜ್ ಲೋಕಿಕೆರೆ ಅವರಿಗೆ ಸಾಥ್ ನೀಡಿದರು.

# ನುಡಿದಂತೆ ನಡೆಯುವ ಕಾಂಗ್ರೆಸ್ ಸರ್ಕಾರ

## ದಾವಣಗೆರೆ ಉತ್ತರ ಕ್ಷೇತ್ರದಲ್ಲಿ ಎಸ್.ಎಸ್. ಮಲ್ಲಿಕಾರ್ಜುನ್ ಚುನಾವಣಾ ಪ್ರಚಾರ



ದಾವಣಗೆರೆ, ಏ. 20- ಮಾಜಿ ಸಚಿವರೂ, ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಬುಧವಾರ ಬೇತೂರು, ರಾಂಪುರ, ನಾಗರಕಟ್ಟೆ, ಲಿಂಗದಹಳ್ಳಿ, ಮಲ್ಲಾಪುರ, ಕಾಡಜ್ಜಿ, ಪುಟಗನಾಳ್, ಬಿ.ಚಿತ್ತಾನಹಳ್ಳಿ ಗ್ರಾಮಗಳಲ್ಲಿ ಇಂದು ಬಿರುಸಿನ ಪ್ರಚಾರ ನಡೆಸಿದರು.

ಅಭ್ಯರ್ಥಿ ಮಲ್ಲಿಕಾರ್ಜುನ್ ಮಾತನಾಡಿ, ನುಡಿದಂತೆ ನಡೆಯುವ ಸರ್ಕಾರ ಯಾವುದಾದರು ಇದ್ದರೆ. ಅದು ಕಾಂಗ್ರೆಸ್ ಸರ್ಕಾರ ಮಾತ್ರ. ನಾಲ್ಕು ಗ್ಯಾರಂಟಿಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ ಎಂದರು.

200 ಯೂನಿಟ್ ವಿದ್ಯುತ್, ಮನೆಯ ಒಡತಿಗೆ ಪ್ರತಿ ತಿಂಗಳು 2000, ನಿರುದ್ಯೋಗಿ ಪದವಿಧರರಿಗೆ ಮೂರು ಸಾವಿರ, ಡಿಪ್ಲೋಮಾ ಪದವೀಧರರಿಗೆ 1500 ನೀಡುವುದಾಗಿ ಘೋಷಣೆ ಮಾಡಿದ್ದೇವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪಕ್ಷದ ಮುಖಂಡರಾದ ಬೇತೂರು ಕರಿಬಸಪ್ಪ, ಮುದೇಗೌಡ್ರು ಗಿರೀಶ್, ಮಾಗಾನಹಳ್ಳಿ ಬಿ.ಕೆ. ಪರುಶುರಾಮ್, ಬೇತೂರು ಪ್ರಭಣ್ಣ, ನಾಗಣ್ಣ, ಬಸಣ್ಣ ಹೆಚ್.ಬಿ.ಬಸವರಾಜ್, ಶಾಂತ ಬಸವನಗೌಡ, ತೋಟದ ರಾಜಣ್ಣ, ಮೇಕಾ ಮುರುಳಿಕೃಷ್ಣ, ನಾಗೇಂದ್ರಪ್ಪ, ಚೇತನ್ ಕುಮಾರ್, ಕಾಡಜ್ಜಿ ಗ್ರಾಮದ ಆಶಾ ಮುರುಳಿ, ಚಂದ್ರಪ್ಪ, ವಾಮಣ್ಣ, ಈಶಣ್ಣ, ಶಬ್ಬೀರ್, ತಿರುಪತಿ, ನಾಗರಕಟ್ಟೆ ಮಂಜಾನಾಯ್ಕ್, ಶೇಖರ್ ನಾಯ್ಕ್, ಮಲ್ಲಾಪುರ ಗ್ರಾಮದ ಬಸವರಾಜ್, ಅಣ್ಣಪ್ಪ, ತಿಪ್ಪೇಸ್ವಾಮಿ, ನಾಗರಾಜ್, ವಕೀಲ ಚಂದ್ರಪ್ಪ, ಬೂದಾಳ್ ಬಾಬು, ಎನ್.ಜಿ.ಪುಟ್ಟಸ್ವಾಮಿ, ಜೆ. ಆರ್. ಷಣ್ಮುಖಪ್ಪ, ನಾಗರಕಟ್ಟೆ ಶಿವಣ್ಣ, ಕಾಂಗ್ರೆಸ್ ಜನಪ್ರತಿನಿಧಿಗಳು, ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಪಾಲ್ಗೊಂಡಿದ್ದರು.

# ರಾಹುಲ್ ಗಾಂಧಿ ಶಿಕ್ಷೆ ತಡೆಗೆ ಕೋರ್ಟ್ ನಕಾರ

(1ನೇ ಪುಟದಿಂದ) ಮಾರ್ಚ್ 23ರಂದು ಹೊರಡಿಸಿದ್ದ ಆದೇಶದ ಬಗ್ಗೆ ಮೇ 20ರಿಂದ ವಿಚಾರಣೆ ನಡೆಸುವುದಾಗಿ ಸೆಷನ್ಸ್ ನ್ಯಾಯಾಲಯ ತಿಳಿಸಿದೆ ಎಂದವರು ಹೇಳಿದ್ದಾರೆ.


ಜೈಲು ಶಿಕ್ಷೆಯ ಹಿನ್ನೆಲೆಯಲ್ಲಿ ಜಾಮೀನು ನೀಡಬೇಕು ಹಾಗೂ ಶಿಕ್ಷೆಯನ್ನು ತಡೆಯಬೇಕು ಎಂದು ಏಪ್ರಿಲ್ 3ರಂದು ರಾಹುಲ್ ಗಾಂಧಿ ಪರ ವಕೀಲರು ಅರ್ಜಿ ದಾಖಲಿಸಿದ್ದರು. ನ್ಯಾಯಾಲಯ ಜಾಮೀನು ಮಂಜೂರು ಮಾಡಿತ್ತು.

ಶಿಕ್ಷೆ ತಡೆಯಬೇಕು ಎಂಬ ಮನವಿಯನ್ನು ತಳ್ಳಿ ಹಾಕಿರುವ ನ್ಯಾಯಾಲಯ, ಶಿಕ್ಷೆ ತಡೆಯುವ ಅಧಿಕಾರವನ್ನು ಎಚ್ಚರಿಕೆಯಿಂದ ಬಳಸಬೇಕು ಸುಪ್ರೀಂ ಕೋರ್ಟ್ ಹಲವಾರು ತೀರ್ಪುಗಳಲ್ಲಿ ತಿಳಿಸಿದೆ.

ಈ ಅಧಿಕಾರವನ್ನು ಉದಾಸೀನವಾಗಿ ಹಾಗೂ ಯಾಂತ್ರಿಕವಾಗಿ ಬಳಸಿದರೆ ನ್ಯಾಯಿಕ ವ್ಯವಸ್ಥೆಯ ಬಗ್ಗೆ ಸಾರ್ವಜನಿಕರು ಹೊಂದಿರುವ ಭಾವನೆಗೆ ಧಕ್ಕೆಯಾಗುತ್ತದೆ. ನ್ಯಾಯಾಂಗದ ಬಗ್ಗೆ ಇರುವ ವಿಶ್ವಾಸ ಉಡುಗುತ್ತದೆ ಎಂದು ತಿಳಿಸಿದೆ.

ಸೂರತ್ ನ್ಯಾಯಾಲಯದ ನಿರ್ಧಾರ ನ್ಯಾಯಾಂಗ ಹಾಗೂ ಜನರ ಗೆಲುವು ಎಂದು ಬಿಜೆಪಿ ಬಣ್ಣಿಸಿದೆ. ಲಭ್ಯವಿರುವ ಕಾನೂನು ಮಾರ್ಗ ಬಳಸಿಕೊಳ್ಳುವುದಾಗಿ ಕಾಂಗ್ರೆಸ್ ತಿಳಿಸಿದೆ.

# ಐಶ್ವರ್ಯ ಪುತ್ರಿ ಬಗ್ಗೆ ತಪ್ಪು ಮಾಹಿತಿ



ನವದೆಹಲಿ, ಏ. 20 – ನಟರಾದ ಅಭಿಷೇಕ್ ಬಚ್ಚನ್ ಹಾಗೂ ಐಶ್ವರ್ಯ ರೈ ಅವರ ಮಗಳಾದ ಆರಾಧ್ಯ ಬಚ್ಚನ್ ಆರೋಗ್ಯದ ಕುರಿತು ತಪ್ಪು ದಾರಿಗೆಳೆಯುವ ಮಾಹಿತಿ ಪ್ರಸಾರ ಮಾಡದಂತೆ ಯೂಟ್ಯೂಬ್ ಚಾನಲ್ ಗಳಿಗೆ ದೆಹಲಿ ಹೈಕೋರ್ಟ್ ನಿರ್ಬಂಧಿಸಿದೆ.

ಮಗಳ ಕುರಿತು ಅಪಪ್ರಚಾರ ಮಾಡುತ್ತಿರುವುದು ವಿಕೃತಿಯಾಗಿದೆ ಎಂದು ಬಚ್ಚನ್ ದಂಪತಿ ಹೈಕೋರ್ಟ್ ಮೊರೆ ಹೋಗಿದ್ದರು.

ಆರಾಧ್ಯ ಬಚ್ಚನ್ ತೀವ್ರ ಅಸ್ವಸ್ಥವಾಗಿದ್ದಾರೆ ಹಾಗೂ ನಿಧನರಾಗಿದ್ದಾರೆ ಎಂದು ಹೇಳಿಕೊಳ್ಳುವ ಕೆಲ ವಿಡಿಯೋಗಳನ್ನು ತೆಗೆದು ಹಾಕಬೇಕು ಎಂದು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. ಈ ಬಗ್ಗೆ ಆದೇಶ ಹೊರಡಿಸಿರುವ ನ್ಯಾಯ ಮೂರ್ತಿ ಸಿ. ಹರಿ ಶಂಕರ್, ಪ್ರತಿಯೊಂದು ಮಗುವನ್ನೂ ಗೌರವದಿಂದ ಕಾಣಬೇಕಿದೆ. ಮಗುವಿನ ಆರೋಗ್ಯದ ಕುರಿತು ತಪ್ಪು ಮಾಹಿತಿ ನೀಡುವುದನ್ನು ಕಾನೂನು ದೃಷ್ಟಿಯಿಂದ ಸಹಿಸಲಾಗದು ಎಂದಿದ್ದಾರೆ.

ಯೂಟ್ಯೂಬ್ ಸಹ ಕಾನೂನು ಪಾಲಿಸಬೇಕಿದೆ. ಈ ಬಗ್ಗೆ ಸಂಸ್ಥೆಯು ಸಾಮಾಜಿಕ ಹೊಣೆಗಾರಿಕೆ ಹೊಂದಿದೆ. ಈ ರೀತಿಯ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ಇರಬಾರದು ಎಂದು ನ್ಯಾಯಾಲಯ ತಿಳಿಸಿದೆ.

ಯೂಟ್ಯೂಬ್ ದಾನದ ಮೇಲೆ ನಡೆಯುವುದಿಲ್ಲ. ಇದು ಲಾಭ ಗಳಿಸುವ ವೇದಿಕೆಯಾಗಿದೆ. ನೀವು ಇಲ್ಲಿ ಹಣ ಗಳಿಸುವ ರೀತಿಯಲ್ಲೇ, ಸಾಮಾಜಿಕ ಹೊಣೆಗಾರಿಕೆ ಹೊಂದಿದ್ದೀರಿ. ಈ ರೀತಿಯ ವಿಡಿಯೋಗಳು ನಿಮ್ಮ ವೇದಿಕೆಯಲ್ಲಿ ಇರಲು ಬಿಡಬಾರದು ಎಂದು ನ್ಯಾಯಾಲಯ ತಾಕೀತು ಮಾಡಿದೆ.

ಹಲವಾರು ಯೂಟ್ಯೂಬ್ ಚಾನಲ್‌ಗಳಿಗೆ ನ್ಯಾಯಾಲಯ ಸಮನ್ಸ್ ಕಳಿಸಿದೆ. ತಪ್ಪು ಮಾಹಿತಿಯ ವಿಡಿಯೋಗಳನ್ನು ಪ್ರಸಾರ ಮಾಡದಂತೆ ನಿರ್ಬಂಧಿಸಿದೆ.

# ಜಗಳೂರಲ್ಲಿ ರೋಡ್ ಶೋ, ದೇವೇಂದ್ರಪ್ಪ ನಾಮಪತ್ರ




ಜಗಳೂರು, ಏ. 20- ವಿಧಾನಸಭಾ ಚುನಾವಣೆಗೆ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧಿಕೃತ ಅಭ್ಯರ್ಥಿಯಾಗಿ ಚಿಕ್ಕಮ್ಮನಹಟ್ಟಿ ಬಿ.ದೇವೇಂದ್ರಪ್ಪ ಕೊನೆಯ ದಿನವಾದ ಇಂದು ನಾಮಪತ್ರ ಸಲ್ಲಿಸಿದರು.

ಕಾಂಗ್ರೆಸ್ ಕಾರ್ಯಕರ್ತರೊಂದಿಗೆ ಪಟ್ಟಣದ ಈಶ್ವರ ದೇವಾಸ್ಥಾನಕ್ಕೆ ತೆರಳಿ ದೇವರ ದರ್ಶನ ಪಡೆದು, ನಂತರ ಪಟ್ಟಣದ ಮುಖ್ಯಬೀದಿಯಲ್ಲಿವಾದ್ಯಗೋಷ್ಠಿಗಳೊಂದಿಗೆ ತೆರೆದ ವಾಹನದಲ್ಲಿ ಭರ್ಜರಿ ರೋಡ್ ಶೋ ನಡೆಸಿದರು.

ಕೆಪಿಸಿಸಿ ಎಸ್ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ, ರಾಜ್ಯ ಕೌಶಲ್ಯ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷೆ ಪುಷ್ಪಾ ಲಕ್ಷ್ಮಣ್ ಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಶೀರ್ ಅಹ್ಮದ್, ಎಸ್.ಮಂಜುನಾಥ್, ತಾಲ್ಲೂಕು ಉಸ್ತುವಾರಿ ಕಲ್ಲೇಶ್‌ರಾಜ್ ಪಟೇಲ್, ಮುಖಂಡರಾದ ಪಿ.ಎಸ್. ಸುರೇಶ್ ಗೌಡ, ಪಲ್ಲಾಗಟ್ಟೆ ಶೇಖರಪ್ಪ ಸೇರಿದಂತೆ ಹಲವಾರು ಗಣ್ಯರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ನಂತರ ತಾಲ್ಲೂಕು ತಹಶೀಲ್ದಾರ್ ಕಛೇರಿಗೆ ತೆರಳಿ ಚುನಾವಣೆ ಅಧಿಕಾರಿಗಳಿಗೆ ನಾಮಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಶ್ರೀಮತಿ ಪುಷ್ಪಾ ಲಕ್ಷ್ಮಣ ಸ್ವಾಮಿ, ಕಲ್ಲೇಶ್ ರಾಜ್ ಪಟೇಲ್, ಎಸ್ ಮಂಜುನಾಥ್, ಪಿ ಎಸ್ ಸುರೇಶ್ ಗೌಡ ಇದ್ದರು.

ನಾಮಪತ್ರ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಬಿ ದೇವೇಂದ್ರಪ್ಪ, ಕಾಂಗ್ರೆಸ್ ರಾಷ್ಟ್ರೀಯ ಪಕ್ಷವಾಗಿದ್ದು ಪಕ್ಷದ ಶಕ್ತಿಯೇ ನನ್ನ ಗೆಲುವಿಗೆ ಶ್ರೀರಕ್ಷೆಯಾಗಲಿದೆ ಎಂದು ತಿಳಿಸಿದರು.

ಚುನಾವಣೆ ನನಗೆ ಹೊಸದೇನು ಅಲ್ಲ. ನಾನು ಈ ಹಿಂದೆ ಜೆಡಿಎಸ್ ಪಕ್ಷದಿಂದ ಸ್ಪರ್ಧಿಸಿದ್ದು ಈಗ ಕಾಂಗ್ರೆಸ್ ಪಕ್ಷದಿಂದ ಚುನಾವಣೆ ಎದುರಿಸುತ್ತಿದ್ದೇನೆ. ರಾಜ್ಯಾದ್ಯಂತ ಕಾಂಗ್ರೆಸ್ ಪಕ್ಷದ ಅಲೆ ಎದ್ದಿದೆ. ಪಕ್ಷಕ್ಕೆ ತಳಮಟ್ಟದ ಕಾರ್ಯಕರ್ತರಿದ್ದು ಅವರ ಸಂಪೂರ್ಣ ಬೆಂಬಲ ನನಗಿದೆ ಎಂದರು.

ವರಿಷ್ಠರು ನನ್ನ ಮೇಲೆ ನಂಬಿಕೆ ಇಟ್ಟು ಟಿಕೆಟ್ ನೀಡಿದ್ದಾರೆ. ಅಭಿವೃದ್ಧಿ ಆಧಾರದ ಮೇಲೆ ಮತಯಾಚನೆ ಮಾಡುತ್ತೇನೆ. ನನ್ನ ಗೆಲುವು ನಿಶ್ಚಿತ ಎಂದು ದೇವೇಂದ್ರಪ್ಪ ವಿಶ್ವಾಸ ವ್ಯಕ್ತಪಡಿಸಿದರು. ನನಗೆ ಬಿಜೆಪಿ ಅಭ್ಯರ್ಥಿ ಪ್ರತಿಸ್ಪರ್ಧಿಯಾಗಿದ್ದು ಪಕ್ಷೇತರ ಅಭ್ಯರ್ಥಿ ಪ್ರತಿಸ್ಪರ್ಧಿ ಆಗಲಾರರು ಎಂದು ದೇವೇಂದ್ರಪ್ಪ ಹೇಳಿದರು.

# ಬಿಜೆಪಿ ಆನಂದಪ್ಪ ಕಾಂಗ್ರೆಸ್‌ಗೆ ಸೇರ್ಪಡೆ



ದಾವಣಗೆರೆ, ಏ. 20 - ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಗಳಾಗಿದ್ದ ನಿವೃತ್ತ ಇಂಜಿನಿಯರ್ ಎಚ್. ಆನಂದಪ್ಪ ಅವರು ಇಂದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಶಾಮನೂರು ಶಿವಶಂಕರಪ್ಪನವರ ಸಮ್ಮುಖದಲ್ಲಿ ಸೇರ್ಪಡೆಯಾದ ಆನಂದಪ್ಪ ಮಾತನಾಡಿ, ಹಿರಿಯ ಮುತ್ಸದ್ದಿ ರಾಜಕಾರಣಿ ಶಾಮನೂರು ಶಿವಶಂಕರಪ್ಪ ಅವರು ನಗರಕ್ಕೆ ಅಪಾರ ಕೊಡುಗೆ ನೀಡಿದ್ದು, ಅವರ ಕಾರ್ಯವೈಖರಿ ಹಾಗೂ ಕಾಂಗ್ರೆಸ್ ಪಕ್ಷದ ಜನಪರ ಆಡಳಿತ ಮೆಚ್ಚಿ ಕಾಂಗ್ರೆಸ್ ಪಕ್ಷವನ್ನು ಸೇರ್ಪಡೆಯಾಗುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಆಯೂಬ್ ಪೈಲ್ವಾನ್, ನಗರಸಭೆ ಮಾಜಿ ಅಧ್ಯಕ್ಷ ಎಂ.ಮಂಜುನಾಥ್, ಒಬಿಸಿ ಘಟಕದ ರಾಜ್ಯ ಕಾರ್ಯದರ್ಶಿ ಜಮ್ನಳ್ಳಿ ನಾಗರಾಜ್, ಅಲ್ಪಸಂಖ್ಯಾತರ ಘಟಕದ ಕೊಡಪಾನ ದಾದಾಪೀರ್, ಚಂದ್ರು ದೀಟೂರ್ ಮತ್ತಿತರರು ಉಪಸ್ಥಿತರಿದ್ದರು.

# ಕಾಂಗ್ರೆಸ್‌ಗೆ ದಸಂಸ ಬೆಂಬಲ

(1ನೇ ಪುಟದಿಂದ) ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ಘೋಷಿಸಿವೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್ ಅವರ ಸಮ್ಮುಖದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ಸಂಘಟನೆಯ ನಾಯಕರುಗಳು ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ಘೋಷಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಡಿ.ಕೆ. ಶಿವಕುಮಾರ್, 20 ಕ್ಕೂ ಹೆಚ್ಚು ವಿವಿಧ ದಲಿತ ಸಂಘಟನೆಗಳಿದ್ದು, ಇವರು ಎಲ್ಲ ಸಂಘಟನೆಗಳ ಜತೆ ಸೇರಿ ಇಡೀ ರಾಜ್ಯದುದ್ದಗಲದಲ್ಲಿ ಚರ್ಚೆ ಮಾಡಿ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡುವ ತೀರ್ಮಾನ ಮಾಡಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಡಿಎಸ್‌ಎಸ್‌ನ ಹಿರಿಯ ನಾಯಕ ಇಂದೂಧರ ಹೊನ್ನಾಪುರ, ನಾವು ಆರಂಭದಿಂದಲೂ ಜನಪರ ಹಾಗೂ ಜಾತ್ಯತೀತ ಬದುಕು ಕಟ್ಟಿಕೊಡಲು ಹೋರಾಟ ಮಾಡಿಕೊಂಡು ಬಂದಿದ್ದೇವೆ.

ಕಳೆದ 9 ವರ್ಷಗಳಿಂದ ದೇಶದಲ್ಲಾಗುತ್ತಿರುವ ಬೆಳವಣಿಗೆ ಗಮನಿಸಿ ಪ್ರಜಾಪ್ರಭುತ್ವ ಹಾಗೂ ಸಂವಿಧಾನ ರಕ್ಷಣೆಗೆ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು ಎಂದು ತೀರ್ಮಾನಿಸಿ ನಾವು ಕೆಲವು ಷರತ್ತುಗಳೊಂದಿಗೆ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡುತ್ತಿದ್ದೇವೆ ಎಂದರು.

# ಅಪಾರ ಬೆಂಬಲಿಗರೊಂದಿಗೆ ಮಾಯಕೊಂಡ ಕಾಂಗ್ರೆಸ್ ಅಭ್ಯರ್ಥಿ ಕೆ.ಎಸ್.ಬಸವರಾಜ್ ನಾಮಪತ್ರ ಸಲ್ಲಿಕೆ



ದಾವಣಗೆರೆ, ಏ. 20- ಮಾಯಕೊಂಡ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಎಸ್.ಬಸವರಾಜ್ ಅದ್ದೂರಿ ಮೆರವಣಿಗೆ ಮೂಲಕ ತೆರಳಿ ಬುಧವಾರ ನಾಮಪತ್ರ ಸಲ್ಲಿಸಿದರು.

ನಗರದ ಪಿ.ಬಿ. ರಸ್ತೆಯಲ್ಲಿರುವ ಶ್ರೀ ಬೀರೇಶ್ವರ ದೇವಸ್ಥಾನದ ಮೈದಾನದಿಂದ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳೊಂದಿಗೆ ಮೆರವಣಿಗೆ ಆರಂಭಿಸಿದ ಅವರು, ನಂತರ ತಹಶೀಲ್ದಾರ್ ಕಚೇರಿಗೆ ತೆರಳಿ ನಾಮಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕೆ.ಎಸ್. ಬಸವರಾಜ್, ಕಾಂಗ್ರೆಸ್ ಬಡವರ, ದೀನ-ದಲಿತರ, ಮಹಿಳೆಯರ ಪರವಾಗಿರುವ ಪಕ್ಷವಾಗಿದ್ದು, 200 ಯೂನಿಟ್ ಉಚಿತ ವಿದ್ಯುತ್, ಕುಟುಂಬದ ಸದಸ್ಯರಿಗೆ ತಲಾ 10 ಕೆಜಿ ಅಕ್ಕಿ , ಪ್ರತಿ ಮನೆಯ ಒಡತಿಗೆ 2 ಸಾವಿರ ರೂ., ನಿರುದ್ಯೋಗಿ ಪದವೀಧ ರರಿಗೆ 3 ಸಾವಿರ, ಡಿಪ್ಲೋಮಾ ಪದವೀಧರರಿಗೆ 1500 ರೂ. ಭತ್ಯೆ ನೀಡುವುದಾಗಿ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದೆ ಎಂದರು.

2018 ರಲ್ಲಿ ಅತ್ಯಲ್ಪ ಮತಗಳ ಅಂತರದಿಂದ ಪರಾಜಿತನಾಗಿರುವ ನಾನು, ಅಂದಿನಿಂದಲೂ ಕೂಡ ಮಾಯಕೊಂಡ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಳ್ಳಿಗಳ ಜೊತೆ ನಿರಂತರ ಸಂಪರ್ಕ ಹೊಂದಿದ್ದೇನೆ ಎಂದು ಹೇಳಿದರು.

ಕೊರೊನಾ ಸಂದರ್ಭದಲ್ಲಿ ಪ್ರತಿ ಹಳ್ಳಿಗಳಿಗೂ ತೆರಳಿ ಜನರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿರುವ ತೃಪ್ತಿ ನನಗಿದೆ. ನನ್ನ ಕೈಲಾದ ಸಹಾಯವನ್ನು ಮಾಡುತ್ತಾ ಬಂದಿದ್ದು, ಜನರ ಪ್ರೀತಿ, ವಿಶ್ವಾಸ ಗಳಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಾ ಬಂದಿದ್ದೇನೆ. ವಿದ್ಯಾರ್ಥಿಗಳು, ಕೂಲಿ ಕಾರ್ಮಿಕರು, ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳ ಸಮಸ್ಯೆಗಳನ್ನು ಆಲಿಸುವ ಮೂಲಕ ಸಾಧ್ಯವಾದಷ್ಟು ಪರಿಹರಿಸುವ ಪ್ರಯತ್ನವನ್ನೂ ಮಾಡಿದ್ದೇನೆ ಎಂದು ಹೇಳಿದರು.

ನಾಮಪತ್ರ ಸಲ್ಲಿಕೆ ವೇಳೆ ಮಾಯಕೊಂಡ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಟಿ. ಹನುಮಂತಪ್ಪ, ಬಸವಾಪಟ್ಟಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಜಿ. ನಾಗರಾಜ್, ಹಿರಿಯ ಮುಖಂಡರೂ, ವಕೀಲರೂ ಆದ ಜಯದೇವನಾಯ್ಕ, ರಾಘವೇಂದ್ರನಾಯ್ಕ, ಮುಖಂಡರಾದ ಗೋವಿಂದಸ್ವಾಮಿ, ಹೊದಿಗೆರೆ ರಮೇಶ, ಕತ್ತಲಗೆರೆ ತಿಪ್ಪಣ್ಣ, ಮಾಯಕೊಂಡ ವೆಂಕಟೇಶ್, ತ್ಯಾವಣಗಿ ಹನುಮಂತಪ್ಪ, ವೀರೇಶ ನಾಯ್ಕ, ಎಪಿಎಂಸಿ ಮಾಜಿ ಅಧ್ಯಕ್ಷ ಎಸ್.ಕೆ. ಚಂದ್ರಶೇಖರ್, ಸಾಹಿತಿ ಪ್ರೊ. ಎ.ಬಿ. ರಾಮಚಂದ್ರಪ್ಪ ಸೇರಿದಂತೆ ಇತರರು ಪಾಲ್ಗೊಂಡಿದ್ದರು.


ಸಿ.ವಿ. ರಾಮನ್ ಎಜುಕೇಷನಲ್ ಅಸೋಸಿಯೇಷನ್ (ರಿ.)

ಡಾ. ಸಿ.ವಿ. ರಾಮನ್

ಕಾಲೇಜ್ ಆಫ್ ಅಡ್ಮಿನಿಸ್ಟ್ರೇಷನ್ & ನೆಟ್‌ವರ್ಕ್ ಸೈನ್ಸಸ್

ಕರ್ನಾಟಕ ಸರ್ಕಾರ ಮತ್ತು ದಾವಣಗೆರೆ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿದೆ.

ನಂ. 1675/ಸಿ3, ಕಾಲೇಜ್ ರಸ್ತೆ, ನಿಟ್ಟುವಳ್ಳಿ, ದಾವಣಗೆರೆ.






ವಿದ್ಯಾರ್ಹತೆ :

- ಪಿಯುಸಿ : ಸೈನ್ಸ್ / ಆರ್ಟ್ಸ್* / ಕಾಮರ್ಸ್

ವಿಶೇಷತೆಗಳು


- ಉತ್ತಮ ಗ್ರಂಥಾಲಯ
- ಕಂಪ್ಯೂಟರ್ ಲ್ಯಾಬ್ ಜೊತೆ ಇಂಟರ್‌ನೆಟ್
- ಸ್ಪೋಕನ್ ಇಂಗ್ಲಿಷ್
- ವ್ಯಕ್ತಿತ್ವ ವಿಕಸನ ತರಬೇತಿ ಅವಶ್ಯಕತೆ ಇರುವವರಿಗೆ ಹಾಸ್ಟೆಲ್ ಸೌಲಭ್ಯ.
- ನುರಿತ ಉಪನ್ಯಾಸಕರ ಬೋಧನೆ

ಕೋರ್ಸ್‌ಗಳು
BCA
B.Com

(CPT / IPCC / FINAL - All Under one roof)
A Unique integration of CA & Graduation

Dr. CV. Raman
College of Administration & Network Sciences
#1657/C3 College Road, Behind Rural Public Police Station Nittuvalli, Hadadi road, Davanagere - 577004
Mob : 99640 19347, 73489 41990 Office : 08192 231577
www.drcvramancollege.edu.in

# ಎಲ್ ನೀನೋದಿಂದ ತತ್ತರಿಸಲಿರುವ ಜಲಚರಗಳು



ವಾಷಿಂಗ್ಟನ್, ಏ. 20 – ಪೆಸೆಫಿಕ್ ಸಮುದ್ರದ ತಳದಲ್ಲಿ ತಾಪಮಾನ ಹೆಚ್ಚಳವಾಗುತ್ತಿದೆ. ಜುಲೈ ವೇಳೆಗೆ ಪರಿಸರ ವ್ಯವಸ್ಥೆಯ ಮೇಲೆ ಹೆಚ್ಚಿನ ಪರಿಣಾಮ ಬೀರುವ ಎಲ್ ನೀನೋ ಕಾಣಿಸಿಕೊಳ್ಳಲಿದೆ. ನಾಲ್ಕು ವರ್ಷಗಳ ನಂತರ ಮೊದಲ ಬಾರಿಗೆ ಎಲ್ ನೀನೋ ಕಂಡು ಬರುತ್ತಿದೆ.

ಎಲ್ ನೀನೋ ಅವಧಿಯಲ್ಲಿ ಇಕ್ವೆಡಾರ್ ಕರಾವಳಿಯ ಪಶ್ಚಿಮ ಭಾಗದ ಸಮುದ್ರದಲ್ಲಿ ತಾಪಮಾನ 1ರಿಂದ 2 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗುತ್ತದೆ.

ಇದೇನೂ ದೊಡ್ಡ ಪ್ರಮಾಣ ಅಲ್ಲ ಎನಿಸಬಹುದು. ಆದರೆ, ಇಷ್ಟು ಬದಲಾವಣೆಯೇ ಗಾಳಿ, ಮಳೆ ಹಾಗೂ ವಿಶ್ವದಾದ್ಯಂತ ತಾಪಮಾನ ಏರಿಳಿತಕ್ಕೆ ಕಾರಣವಾಗಲಿದೆ.

ಎಲ್ಲಾ ಎಲ್ ನಿನೋಗಳು ಒಂದೇ ರೀತಿ ಇರುವುದಿಲ್ಲ. ಆದರೆ, ಸಾಕಷ್ಟು ಎಲ್ ನೀನೋಗಳ ಅಧ್ಯಯನ ನಡೆಸಲಾಗಿರುವ ಹಿನ್ನೆಲೆಯಲ್ಲಿ, ಇದರಿಂದ ಆಗುವ ಪರಿಣಾಮಗಳ ಬಗ್ಗೆ ಸ್ಪಷ್ಟತೆ ದೊರೆತಿದೆ.

ಎಲ್ ನೀನೋದಿಂದ ನೆಲದ ಮೇಲೆ ಆಗುವ ಪರಿಣಾಮಗಳ ಬಗ್ಗೆ ಜನರು ಹೆಚ್ಚು ಗಮನ ಹರಿಸುತ್ತಾರೆ. ಸಮುದ್ರದ ನೀರು ಬಿಸಿಯಾಗುವುದರಿಂದ ಕೆಲವೆಡೆ ಹೆಚ್ಚು ಮಳೆಯಾದರೆ, ಇನ್ನು ಕೆಲವೆಡೆ ಕಡಿಮೆ ಮಳೆಯಾಗುತ್ತದೆ. ಕೆಲವೆಡೆ ಚಂಡಮಾರುತಗಳೂ ಕಂಡು ಬರುತ್ತವೆ.

ಇದೇ ವೇಳೆ ಎಲ್ ನೀನೋದಿಂದ ಸಮುದ್ರ ಜೀವ ವ್ಯವಸ್ಥೆಯ ಮೇಲೂ ಪರಿಣಾಮವಾಗುತ್ತದೆ. ಜಲಚರಗಳಿಂದ ಹಿಡಿದು ಮೀನುಗಾರಿಕೆ ಉದ್ಯಮದವರೆಗೆ ಎಲ್ಲೆಡೆ ಪರಿಣಾಮ ಕಂಡು ಬರುತ್ತದೆ.

ಜಾಗತಿಕ ತಾಪಮಾನ ಈಗಾಗಲೇ ಹೆಚ್ಚಿನ ಮಟ್ಟದಲ್ಲಿದೆ. ಈ ನಡುವೆಯೇ ಬಿಸಿ ಗಾಳಿಯ ಪ್ರಕೋಪದ ಕಾರಣದಿಂದಾಗಿ ಸೂಕ್ಷ್ಮ ಮೀನುಗಳ ಮೇಲೆ ಪರಿಣಾಮವಾಗಲಿದೆ.

ನೆಲದ ಮೇಲೆ ಬಿಸಿ ಗಾಳಿ ಬೀಸುವ ರೀತಿಯಲ್ಲೇ, ಸಮುದ್ರದ ಒಳಗೂ ಬಿಸಿ ಗಾಳಿಯ ಪರಿಣಾಮಗಳು ಉಂಟಾಗುತ್ತವೆ. ಜಲಚರಗಳು ನಿರ್ದಿಷ್ಟ ಪ್ರಮಾಣದ ತಾಪಮಾನಕ್ಕೆ ಹೊಂದಿಕೊಂಡಿರುತ್ತವೆ. ತಾಪಮಾನ ಸ್ವಲ್ಪವೇ ಹೆಚ್ಚಾದರೂ ಮೀನುಗಳ ಜೀವನದ ಮೇಲೆ ಪರಿಣಾಮವಾಗುತ್ತದೆ. ತಾಪಮಾನ ಹೆಚ್ಚಾದಷ್ಟೂ ಮೀನುಗಳ ಆಯುಷ್ಯ ಕಡಿಮೆಯಾಗುತ್ತದೆ.

ಪ್ರತಿ ವರ್ಷ ಬಿಸಿ ಅಲೆಗಳ ಪರಿಣಾಮದಿಂದ ಹಲವು ಶತಕೋಟಿ ಡಾಲರ್‌ಗಳಷ್ಟು ನಷ್ಟವಾಗುತ್ತದೆ ಎಂದು ಅಂದಾಜಿಸಲಾಗಿದೆ.

ಇತ್ತೀಚಿನ ಅಧ್ಯಯನವೊಂದರ ಪ್ರಕಾರ, ಸಮುದ್ರದ ಮೇಲ್ಮೈನಲ್ಲಿ ಬೀಸುವ ಬಿಸಿ ಅಲೆಗಳಿಗಿಂತ, ಸಮುದ್ರದ ತಳ ಭಾಗದಲ್ಲಿ ಕಂಡು ಬರುವ ಅಲೆಗಳು ಹೆಚ್ಚು ತೀವ್ರವಾಗಿರುತ್ತವೆ. ಹಾಗೂ ಈ ಅಲೆಗಳ ಪರಿಣಾಮ ದೀರ್ಘ ಕಾಲದವರೆಗೆ ಉಳಿದುಕೊಳ್ಳುತ್ತದೆ.

ಈ ಬಾರಿಯ ಎಲ್ ನೀನೋ ಮುಂದಿನ ಆರು ತಿಂಗಳಿನಿಂದ ಒಂಭತ್ತು ತಿಂಗಳಿನವರೆಗೆ ಇರುತ್ತದೆ ಎಂದು ಕೆಲ ಅಂದಾಜುಗಳು ತಿಳಿಸಿವೆ. ಹೀಗಾಗಿ 2024ರ ಜನವರಿಯಿಂದ ಮಾರ್ಚ್ ನಡುವೆ ವಿಶ್ವದ ಹಲವೆಡೆ ಜಲಚರಗಳಿಗೆ ಸಂಕಷ್ಟವಾಗಲಿದೆ.

# ಒಳ ಮೀಸಲಾತಿ ವರ್ಗೀಕರಣದಲ್ಲಿರುವ ಜಾತಿ ಪಟ್ಟಿಗಳ ಗೊಂದಲ ಸರಿಪಡಿಸಲು ಆಗ್ರಹ

ದಾವಣಗೆರೆ, ಏ.20- ರಾಜ್ಯ ಸರ್ಕಾರ ಇತ್ತೀಚೆಗೆ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ವರ್ಗೀಕರಣ ಮಾಡಿರುವುದು ಸ್ವಾಗತಾರ್ಹ ವಿಚಾರವಾದರೂ, ಜಿಲ್ಲಾವಾರು ಜಾತಿಗಳ ವರ್ಗೀಕರಣ ಗೊಂದಲದ ಗೂಡಾಗಿದೆ ಎಂದು ಮಹಾ ಜನ್ ಜಾಗೃತ್ ಸಮಿತಿ ಸಂಸ್ಥಾಪಕ ಹೆಚ್.ಎನ್ ಚಂದ್ರಪ್ಪ ಆಕ್ಷೇಪ ವ್ಯಕ್ತಪಡಿಸಿದರು.

ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿರುವ 101 ಜಾತಿಗಳನ್ನು 4 ವರ್ಗಗಳಾಗಿ ವಿಭಾಗಿಸಿ, ಸಚಿವ ಸಂಪುಟದಲ್ಲಿ ಮಂಡಿಸಿ, ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವ ಕ್ರಮವು ಕೆಲವು ನ್ಯೂನತೆಗಳಿಂದ ಕೂಡಿದೆ ಎಂದು ಹೇಳಿದರು.

ಆದೇಶದ ಪ್ರಕಾರ ಗುಂಪು 1 ರಲ್ಲಿ ಆದಿ ದ್ರಾವಿಡಕ್ಕೆ ಸಂಬಂಧಿಸದ ಜಾತಿಗಳಾದ ಸಮಗಾರ, ಮೋಚಿ, ಕಮಾಟಿ, ಅಸಾದರು, ಬಾಂಚಿ, ಅರಳಯ್ಯ, ಚಮ್ಮಾರ, ತೆಲುಗು ಮೋಚಿ, ಕಮಾಟಿ, ಮೋಚಿ, ರಾಣೇಗರ್, ರೋಹಿದಾಸ್, ರೋಹಿತ್ ಗ್ರೂಪ್ 1 ರ ಪ್ರಕಾರ ಮತ್ತು 3 ಮಾದಿಗ, 4 ಸಮಗಾರ ಎಂದು ನಮೂದಿಸಿ ಶೇ.6 ರಷ್ಟು ಮೀಸಲಾತಿ ನೀಡಲಾಗಿದೆ. ಆದರೆ, ಗ್ರೂಪ್ 2 ರಲ್ಲಿ ಆದಿಕರ್ನಾಟಕ ಎಂದು ಅದರಲ್ಲಿ ಚಲವಾದಿ, ಚಲುವಾದಿ, ಚನ್ನಯ್ಯ, ದಾಸರು, ಮಹರ್, ಹೊಲೆಯ ಮುಂತಾದ ಜಾತಿಗಳ ಹೆಸರನ್ನು ನಮೂದಿಸಿ ಈ ವರ್ಗಗಳಿಗೆ ಶೇ.5.5 ರಷ್ಟು ಮೀಸಲಾತಿ ನಿಗದಿ ಪಡಿಸಲಾಗಿದೆ ಎಂದರು.

ಆದಿ ಕರ್ನಾಟಕ ಮತ್ತು ಆದಿ ದ್ರಾವಿಡ ಎಂಬ ಹೆಸರುಗಳನ್ನು ರಾಜ್ಯದ ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಗುರುತಿಸುವುದು ವಾಡಿಕೆಯಾಗಿದೆ. ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗ ಹಾಗೂ ಇತರೆ ಜಿಲ್ಲೆಗಳಲ್ಲಿ ಆದಿ ಕರ್ನಾಟಕ ಎಂದರೆ ಮಾದಿಗ ಸಂಬಂಧಿತ ಜಾತಿಗಳು ಎಂದು ಗುರುತಿಸಿ, ಇವರಿಗೆ ಆದಿ ಕರ್ನಾಟಕ ಎಂಬ ಹೆಸರಿನಡಿ ಸರ್ಕಾರದ ಜಾತಿ ಪ್ರಮಾಣ ಪತ್ರ ಹಾಗೂ ಯೋಜನೆಗಳಡಿ ಸೌಲಭ್ಯ ನೀಡಲಾಗುತ್ತಿದೆ. ಆದರೆ, ಹೊಲೆಯ ಅಥವಾ ಚಲವಾದಿ ಸಂಬಂಧಿತ ಜಾತಿಗಳಿಗೆ ಈ ಭಾಗದಲ್ಲಿ ಆದಿ ದ್ರಾವಿಡ ಪ್ರಮಾಣ ಪತ್ರ ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ ಹಾಗೂ ಇತರೆ ಜಿಲ್ಲೆಗಳಲ್ಲಿ ಆದಿ ಕರ್ನಾಟಕ ಎಂದರೆ ಹೊಲೆಯ ಅಥವಾ ಚಲವಾದಿ ಸಂಬಂಧಿತ ಜಾತಿಗಳೆಂದು ಗುರುತಿಸಿ ಆದಿ ಕರ್ನಾಟಕ ಎಂಬ ಹೆಸರಿನಡಿ ಜಾತಿಯ ಪ್ರಮಾಣ ಪತ್ರ ನೀಡಲಾಗುತ್ತದೆ. ಮುಖ್ಯವಾಗಿ ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ ಆ ಭಾಗದ ಜಿಲ್ಲೆಗಳಲ್ಲಿ ಮಾದಿಗ, ತ್ರಿಮತಸ್ಥ, ಮೋಚಿ, ದೋಹರ, ದಕ್ಕಲಿಗ ಜಾತಿಗಳಿಗೆ ಆದಿ ದ್ರಾವಿಡ ಪ್ರಮಾಣ ಪತ್ರ ನೀಡಲಾಗುತ್ತದೆ. ಹಾಗಾಗಿ, ಇತಿಹಾಸ ಪೂರ್ವದಿಂದಲೂ ಸಾಂಸ್ಕೃತಿಕ ಭಿನ್ನತೆಯನ್ನು ಹೊಂದಿದ ಆದಿ ಕರ್ನಾಟಕ ಪದವು ಮಾದಿಗ ಸಂಬಂಧಿತ ಜಾತಿಗಳಿಗೆ ಹೊಂದಿಕೆಯಾಗಿದ್ದು, ಕಾರ್ಯಾಂಗದ ಅಧಿಕಾರಿಗಳು ಮತ್ತೊಮ್ಮೆ ಪರಿಶೀಲಿಸಿ, ಸಾಮಾಜಿಕ ನ್ಯಾಯ ಒದಗಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿಯ ರಾಜ್ಯಾಧ್ಯಕ್ಷ ಶಿವಕುಮಾರ್.ಕೆ, ರಾಜ್ಯ ಉಪಾಧ್ಯಕ್ಷ ಎನ್. ಮಂಜುನಾಥ್, ಜಿಲ್ಲಾಧ್ಯಕ್ಷ ಎ.ಕೆ. ಸುರೇಶ್, ಸುಭಾಷ್ ಎ.ಕೆ ಮತ್ತಿತರರಿದ್ದರು.

## ದೊಡ್ಡಪೇಟೆಯಲ್ಲಿ ಬಸವ ಜಯಂತಿ

ಶ್ರೀ ಜಗಜ್ಯೋತಿ ಬಸವೇಶ್ವರರ 112ನೇ ವರ್ಷದ ಜಯಂತ್ಯೋತ್ಸವವು ಇಂದಿನಿಂದ ನಾಲ್ಕು ದಿನಗಳ ಕಾಲ ದಾವಣಗೆರೆಯ ದೊಡ್ಡಪೇಟೆಯ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ನಡೆಯಲಿದೆ.

ಇಂದು ಪ್ರಾತಃಕಾಲ ವಚನಾಭಿಷೇಕ, ಗಣಾರಾಧನೆ, ನಾಳೆ ಶನಿವಾರ ರಾತ್ರಿ 7.30ಕ್ಕೆ ಚೌಕಿಪೇಟೆಯ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಭಜನಾ ಸಂಘದಿಂದ ಭಜನೆ ಜರುಗಲಿದೆ.

ದಿನಾಂಕ 23ರ ಭಾನುವಾರ ಬೆಳಿಗ್ಗೆ 9 ಗಂಟೆಗೆ ಮಹಿಳೆಯರಿಂದ ತೊಟ್ಟಿಲು ಪೂಜಾ ಕಾರ್ಯಕ್ರಮ, ಸಂಜೆ 6 ಗಂಟೆಗೆ ಹೂವಿನ ಅಲಂಕಾರ ಅಡ್ಡ ಪಲ್ಲಕ್ಕಿಯಲ್ಲಿ ಶ್ರೀ ಬಸವೇಶ್ವರರ ಬೆಳ್ಳಿ ಪುತ್ಥಳಿಯ ಭವ್ಯ ಮೆರವಣಿಗೆ ಏರ್ಪಾಡಾಗಿದೆ.

ದಿನಾಂಕ 24ರ ಸೋಮವಾರ ಮಧ್ಯಾಹ್ನ 12.30ಕ್ಕೆ ಸಾರ್ವಜನಿಕರಿಗೆ ಮಹಾದಾಸೋಹ ಆಯೋಜನೆಗೊಂಡಿದೆ. ದೊಡ್ಡಪೇಟೆ ಶ್ರೀ ಬಸವೇಶ್ವರ ಸೇವಾ ಸಂಘದ ಅಧ್ಯಕ್ಷರೂ ಆಗಿರುವ ಕೈಗಾರಿಕೋದ್ಯಮಿ ಅಥಣಿ ಎಸ್. ವೀರಣ್ಣ ಮತ್ತು ಸಹೋದರರು ದಾಸೋಹದ ಸೇವಾರ್ಥಿಗಳಾಗಿದ್ದಾರೆ.

## ಚಂದ್ರ ಗೋಚರಿಸದಿದ್ದರೆ ನಾಡಿದ್ದು ರಂಜಾನ್ ಆಚರಣೆ

ದಾವಣಗೆರೆ, ಏ.20- ರಂಜಾನ್ ಹಬ್ಬ ಆಚರಣೆಯ ಸಂಪ್ರದಾಯದಂತೆ ಇದೇ ದಿನಾಂಕ 21 ರಂದು ಚಂದ್ರ ಗೋಚರವಾದರೆ ಮಾತ್ರ ದಿನಾಂಕ 22 ರಂದು ಹಬ್ಬ ಆಚರಿಸಲಾಗುವುದು. ಇಲ್ಲವಾದರೆ ದಿನಾಂಕ 23 ರಂದು ಬೆಳಿಗ್ಗೆ 10 ಗಂಟೆಗೆ ಆಚರಣೆ ಮಾಡಲಾಗುವುದು ಎಂದು ತಂಜೀಮುಲ್ ಮುಸ್ಲಿಮೀನ್ ಫಂಡ್ ಅಸೋಸಿಯೇಷನ್ ಅಧ್ಯಕ್ಷ ಶೇಖ್ ದಾದಾಪೀರ್ (ದಾದು ಸೇಠ್) ತಿಳಿಸಿದ್ದಾರೆ.

# ತರಳಬಾಳು ಬೃಹನ್ಮಠದಿಂದ ನಗರದಲ್ಲಿ ನಾಳೆ ಬಸವ ಜಯಂತಿ





ದಾವಣಗೆರೆ, ಏ. 20- ಸಿರಿಗೆರೆಯ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ವತಿಯಿಂದ ನಾಡಿದ್ದು ದಿನಾಂಕ 23 ರಂದು ಭಾನುವಾರ ಸಂಜೆ 5.30 ಕ್ಕೆ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದಲ್ಲಿ ಬಸವ ಜಯಂತಿ ಕಾರ್ಯಕ್ರಮ ನಡೆಯಲಿದೆ.

ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ, ಜರ್ಮನಿಯ ಪ್ರೊ. ಗೀತಾ ಧರ್ಮಪಾಲ್, ಬೆಂಗಳೂರಿನ ಡಾ. ಸುಧಾ ಸೀತಾರಾಮನ್, ರಾಜ್ಯ ರೈತ ಸಂಘದ ಅಧ್ಯಕ್ಷರೂ, ಸಾಧು ಸದ್ಧರ್ಮ ವೀರಶೈವ ಸಂಘದ ಅಧ್ಯಕ್ಷ ಹೆಚ್. ಆರ್. ಬಸವರಾಜಪ್ಪ, ಧಾರವಾಡ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಗೌರವ ಕಾರ್ಯದರ್ಶಿ ಚಂದ್ರಕಾಂತ ಮಟ್ಟಿ ಆಗಮಿಸಲಿದ್ದಾರೆ.

'ಬಸವಣ್ಣನವರ ವಚನಗಳಲ್ಲಿ ಸಮಾನತೆಯ ಆಶಯಗಳು' ಕುರಿತು ತುಮಕೂರು ಸಂಸ್ಕೃತಿ ಚಿಂತಕ ಡಾ. ನಟರಾಜ ಎಸ್. ಬೂದಾಳು ಉಪನ್ಯಾಸ ನೀಡಲಿದ್ದಾರೆ. ಪ್ರೊ. ಬಸವನಾಳ ಶಿವಲಿಂಗಪ್ಪ ಅವರ ಸಂಪಾದಕತ್ವದ 'ಬಸವಣ್ಣನವರ ಷಟ್‌ಸ್ಥಲದ ವಚನಗಳು' ಕುರಿತ ಪುಸ್ತಕ ಬಿಡುಗಡೆಯಾಗಲಿದೆ.

ಇದೇ ಸಂದರ್ಭದಲ್ಲಿ ಶ್ರೀ ತರಳಬಾಳು ಜಗದ್ಗುರುಗಳವರಿಂದ 'ಶಿವಶರಣರ ವಚನ ಸಂಪುಟ' ತಂತ್ರಾಂಶದ ಪ್ರಾತ್ಯಕ್ಷಿಕೆ ನಡೆಸಿಕೊಡಲಿದ್ದಾರೆ.

ಸುಶ್ರಾವ್ಯ ಸಂಗೀತ ವಿದ್ಯಾಲಯದ ಯಶಾ ದಿನೇಶ್, ಹಿಂದುಸ್ಥಾನಿ ಗಾಯಕ ಆನಂದ್ ಆರ್. ಪಾಟೀಲ್ ಅವರಿಂದ ವಚನ ಗೀತೆ, ಶ್ರೀ ತರಳಬಾಳು ಜಗದ್ಗುರು ರೆಸಿಡೆನ್ಸಿಯಲ್ ಪ್ರೌಢಶಾಲೆಯ ಮಕ್ಕಳಿಂದ ವಚನ ನೃತ್ಯ, ನಮನ ಅಕಾಡೆಮಿ ಡಿ.ಕೆ. ಮಾಧವಿ, ನೂಪುರ ಕಲಾ ಸಂಸ್ಥೆಯ ಬೃಂದಾ ಅವರಿಂದ ಭರತನಾಟ್ಯ ಕಾರ್ಯಕ್ರಮ ಇರುತ್ತದೆ.

# ದಕ್ಷಿಣಕ್ಕೆ ಪಕ್ಷೇತರ ಅಭ್ಯರ್ಥಿಯಾಗಿ ನೌಶೀನ್ ತಾಜ್



ದಾವಣಗೆರೆ, ಏ.20- ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಸಮಾಜ ಸೇವಕರಾದ ನೌಶೀನ್ ತಾಜ್ ಕೋಂ ದಾದಾಪೀರ್ ಎಲ್. ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆ ಯಲ್ಲಿ ರಾಷ್ಟ್ರೀಯ ಪಕ್ಷಗಳು ಮಹಿಳೆಯರಿಗೆ ಚುನಾವಣೆ ಯಲ್ಲಿ ಸ್ಪರ್ಧಿಸಲು ಅವಕಾಶ ನೀಡದೇ ತಾರತಮ್ಯ ಮಾಡಿವೆ. ಕೇವಲ ಭಾಷಣಗಳಲ್ಲಿ ಮಾತ್ರ ರಾಜಕೀಯ ಮುಖಂಡರು ಮಹಿಳೆಯರಿಗೆ ಶೇ.33 ರಷ್ಟು ಪ್ರಾತಿನಿಧ್ಯ ನೀಡಿದ್ದೇವೆ ಎಂದು ಸುಳ್ಳು ಆಶ್ವಾಸನೆಗಳನ್ನು ನೀಡಿ ಮೋಸ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ನಿಹಾನ್ ಷರೀಫ್, ಸದ್ದಾಂ ಹುಸೇನ್, ತನ್ವೀರ್ ಅಹಮ್ಮದ್, ಇಬ್ರಾಹಿಂ, ಸಾಹೀಲ್, ಸಂಷಿತ್ ಖಾನ್ ಮತ್ತಿತರರಿದ್ದರು.

## ನಗರದಲ್ಲಿ ಇಂದು ಪ್ರಭಾತ್‌ಪೇರಿ



112ನೇ ವರ್ಷದ ಬಸವ ಜಯಂತ್ಯೋತ್ಸವದ ಪ್ರಯುಕ್ತ ಶ್ರೀ ವಿರಕ್ತ ಮಠ ಮತ್ತು ಲಿಂಗಾಯತ ತರುಣ ಸಂಘ ಇವರ ಜಂಟಿ ಆಶ್ರಯದಲ್ಲಿ ಬಸವ ಪ್ರಭಾತ್ ಪೇರಿಯನ್ನು ಇಂದಿನಿಂದ ಹಮ್ಮಿಕೊಳ್ಳಲಾಗಿದ್ದು, ಇದೇ ದಿನಾಂಕ 23ರವರಗೆ ನಡೆಯಲಿದೆ.

ಪ್ರತಿದಿನ ಬೆಳಿಗ್ಗೆ 7.30 ಕ್ಕೆ ನಗರದ ವಿವಿಧ ಬಡಾವಣೆಗಳಲ್ಲಿ ಜರುಗಲಿದ್ದು, ಪ್ರಭಾತ್ ಪೇರಿಗೆ ಬಸವ ಕಲಾ ಲೋಕ ಪ್ರತಿನಿತ್ಯ ವಚನ ಭಜನೆ ಸಾಥ್ ನೀಡಲಿದೆ. ಶ್ರೀ ವಿರಕ್ತ ಮಠ - ಶ್ರೀ ಶಿವಯೋಗಾ ಶ್ರಮದ ಶ್ರೀ ಬಸವಪ್ರಭು ಸ್ವಾಮೀಜಿ ನೇತೃತ್ವ ವಹಿಸುವರು.

ಇಂದು ಮದಕರಿ ನಾಯಕ ವೃತ್ತ, ತಳವಾರ ಕೇರಿ, ಕಾಳಿಕಾದೇವಿ ರಸ್ತೆ, ನಾಳೆ ಶನಿವಾರ ಕಾಳಿಕಾದೇವಿ ರಸ್ತೆ, ಆನೆಕೊಂಡ ಪೇಟೆ, ಹಳೇಪೇಟೆ, ಎಸ್.ಕೆ.ಪಿ. ರಸ್ತೆಯಿಂದ ವಿರಕ್ತ ಮಠ ತಲುಪಲಿದೆ. ಬಸವ ಪ್ರಭಾತ್ ಪೇರಿಯಲ್ಲಿ ಭಾಗವಹಿಸ ಲಿಚ್ಛಿಸುವವರು ವಿವರಕ್ಕೆ ಮೊಬೈಲ್ 96118-89151 ರಲ್ಲಿ ಸಂಪರ್ಕಿಸುವಂತೆ ಲಿಂಗಾಯತ ತರುಣ ಸಂಘದ ಸಂಚಾಲಕ ಕಣಕುಪ್ಪಿ ಮುರುಗೇಶಪ್ಪ ಕೋರಿದ್ದಾರೆ.

## ಇಸ್ಕಾನ್‌ನಿಂದ ಸಂಭ್ರಮ-ಬೇಸಿಗೆ ಶಿಬಿರ

ದಾವಣಗೆರೆ, ಏ.19- ಮಕ್ಕಳಲ್ಲಿ ಜೀವನದ ಮೌಲ್ಯಗಳನ್ನು ಬೆಳೆಸುವ ನಿಟ್ಟಿನಲ್ಲಿ ನಗರದ ಇಸ್ಕಾನ್ ಸಂಸ್ಥೆಯು ಇದೇ ದಿನಾಂಕ 24 ರಿಂದ ಮೇ 2 ರವರೆಗೆ 'ಸಂಭ್ರಮ- ಬೇಸಿಗೆ ಶಿಬಿರ'ವನ್ನು ಆಯೋಜಿಸಿದೆ ಎಂದು ದಾವಣಗೆರೆ ಇಸ್ಕಾನ್‌ನ ಮುಖ್ಯಸ್ಥ ಅವಧೂತ ಚಂದ್ರದಾಸ್ ತಿಳಿಸಿದ್ದಾರೆ.

ಶಿಬಿರವನ್ನು 8 ರಿಂದ 14 ವರ್ಷದೊಳಗಿನ ಮಕ್ಕಳಿಗಾಗಿ ನಡೆಸಲಾಗುತ್ತಿದೆ. ಶಿಬಿರದಲ್ಲಿ ರಾಮಾಯಣದ ಪ್ರಸಂಗಗಳು ಹಾಗೂ ಅಲ್ಲಿ ಬರುವ ಪಾತ್ರಗಳಿಂದ ಯಾವ ಯಾವ ಮೌಲ್ಯಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳಬಹುದು ಎಂಬುದನ್ನು ಮಕ್ಕಳಿಗೆ ತಿಳಿಸಿಕೊಡಲಾಗುವುದು.

ಉದಾಹರಣೆಗೆ ಶ್ರೀರಾಮನು ತನ್ನ ತಂದೆಯ ಮಾತುಗಳನ್ನು ಗೌರವಿಸುವುದಕ್ಕಾಗಿ ವನವಾಸಕ್ಕೆ ತೆರಳಲು ಒಪ್ಪಿದ್ದು, ರಾಮ ಲಕ್ಷ್ಮಣರ ಸೋದರ ಪ್ರೇಮ ಹೀಗೆ ಹಲವು ವಿಷಯಗಳಲ್ಲಿ ಅಡಗಿರುವ ಮೌಲ್ಯಗಳನ್ನು ಮಕ್ಕಳಿಗೆ ತಿಳಿಸಿಕೊಡಲಾಗುವುದು. ಇದಲ್ಲದೆ, ಭಗವದ್ಗೀತೆ ಶ್ಲೋಕಗಳು, ಕರ-ಕುಶಲತೆ, ನೃತ್ಯ, ಸಂಗೀತ, ಕಲೆ, ರಂಗೋಲಿ, ನಾಟಕ ಹೀಗೆ ಅನೇಕ ವಿಷಯಗಳನ್ನು ಮಕ್ಕಳಿಗೆ ತಿಳಿಸಿಕೊಡಲಾಗುವುದು ಎಂದು ತಿಳಿಸಿದ್ದಾರೆ. ಆಸಕ್ತರು ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ: 910803596, ನೋಂದಣಿ ಲಿಂಕ್: https://forms.gle/5q1BEQGkZG9T3aoFU8

# ಜೆಡಿಎಸ್ ಅಭ್ಯರ್ಥಿ ನೂರ್ ಅಹ್ಮದ್ ನಾಮಪತ್ರ ಸಲ್ಲಿಕೆ



**ಹರಪನಹಳ್ಳಿ**

ಹರಪನಹಳ್ಳಿ, ಏ.20- ಹರಪನಹಳ್ಳಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಪಕ್ಷದ ಅಭ್ಯರ್ಥಿಯಾಗಿ ಮಾಜಿ ಸಚಿವ ಎನ್.ಎಂ.ನಭೀ ಅವರ ಪುತ್ರ ನೂರ್ ಅಹ್ಮದ್ ಗುರುವಾರ ನಾಮಪತ್ರ ಸಲ್ಲಿಸಿದರು.

ನಾಮಪತ್ರ ಸಲ್ಲಿಕೆಗೂ ಮುನ್ನ ಪಟ್ಟಣದ ಶ್ರೀ ಕೋಟೆ ಆಂಜನೇಯ ದೇವಸ್ಥಾನಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿ, ನಂತರ ಹರಿಹರ ಸರ್ಕಲ್ ಬಳಿ ಇರುವ ದರ್ಗಾಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿ, ಅಲ್ಲಿಂದ ಪಕ್ಷದ ಕಾರ್ಯಕರ್ತರೊಂದಿಗೆ ತೆರೆದ ವಾಹನದಲ್ಲಿ ಮೆರವಣಿಗೆ ಮೂಲಕ ಮಿನಿ ವಿಧಾನಸೌಧಕ್ಕೆ ತೆರಳಿ ಚುನಾವಣಾಧಿಕಾರಿ ಟಿ.ವಿ.ಪ್ರಕಾಶ್ ಅವರಿಗೆ ನಾಮಪತ್ರ ಸಲ್ಲಿಸಿದರು.

ನಾಮಪತ್ರ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅಭ್ಯರ್ಥಿ ನೂರ್ ಅಹ್ಮದ್, ತಾಲ್ಲೂಕಿನಲ್ಲಿ ಜೆಡಿಎಸ್‌ಗೆ ಉತ್ತಮ ವಾತವರಣವಿದ್ದು, ತಮ್ಮದೇ ಆದ ಕಾರ್ಯಕರ್ತರ ಪಡೆ ಹೊಂದಿದೆ. ರಾಜ್ಯದಲ್ಲಿ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರು ರೈತರ ಸಾಲ ಮನ್ನಾ ಸೇರಿದಂತೆ, ಅನೇಕ ಜನಪರ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಬಾರಿ ಮತದಾರರು ಜೆಡಿಎಸ್ ಪಕ್ಷಕ್ಕೆ ಬೆಂಬಲಿಸುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ವೇಳೆ ಮಾಜಿ ಸಚಿವ ಎನ್.ಎಂ.ನಭೀ, ಜೆಡಿಎಸ್ ಜಿಲ್ಲಾಧ್ಯಕ್ಷ ಕೊಟ್ರೇಶಪ್ಪ, ತಾಲ್ಲೂಕು ಅಧ್ಯಕ್ಷ ಶಿರಹಟ್ಟಿ ದಂಡೆಪ್ಪ, ಅರಸೀಕೆರೆ ಜೆಡಿಎಸ್ ಜಿಲ್ಲಾ ಸದಸ್ಯ ಎಂ.ಸುರೇಶ್, ಮುಖಂಡರಾದ ಸಾಸ್ವಿಹಳ್ಳಿ ಚನ್ನಬಸವನಗೌಡ್ರು, ಅಲಮರಸಿಕೆರೆ ಸಣ್ಣವೀರಣ್ಣ ಇದ್ದರು.

# ದಕ್ಷಿಣದಿಂದ ಪಕ್ಷೇತರ ಅಭ್ಯರ್ಥಿ ಎಂ.ಬಿ. ಪ್ರಕಾಶ್ ನಾಮಪತ್ರ ಸಲ್ಲಿಕೆ



ದಾವಣಗೆರೆ, ಏ. - ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಎಂ.ಬಿ.ಪ್ರಕಾಶ್ ಅವರು ನಾಮಪತ್ರವನ್ನು ಚುನಾವಣಾಧಿಕಾರಿ ರೇಣುಕಾ ಅವರಿಗೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಟಿ.ಎಂ.ಆಂಜನೇಯ, ಎಂ.ವಿ. ಕರಿಬಸಪ್ಪ, ಚಂದ್ರಶೇಖರ್ ಎನ್.ಎಸ್. ಅಮರೇಶ ಬಳಗನೂರು ಹಾಜರಿದ್ದರು.

## ಬಸವ ಬಳಗದಲ್ಲಿ ಬಸವ ಜಯಂತಿ

ಬಸವ ಬಳಗ, ನೀಲಾಂಬಿಕಾ ಅನುಭಾವ ಕೇಂದ್ರ ಹಾಗೂ ಅಜ್ಜಂಪುರ ಶೆಟ್ರ ಸೇವಾ ಟ್ರಸ್ಟ್ ಇವರುಗಳ ಸಂಯುಕ್ತಾಶ್ರಯದಲ್ಲಿ ಇಂದಿನಿಂದ ಇದೇ ದಿನಾಂಕ 23ರ ವರೆಗೆ ಬಸವ ಜಯಂತಿ ಕಾರ್ಯಕ್ರಮಗಳನ್ನು ಸರಸ್ವತಿ ನಗರದ ಬಸವ ಬಳಗದಲ್ಲಿ ಹಮ್ಮಿಕೊಳ್ಳಲಾಗಿದೆ.

ಇಂದು ಬೆಳಿಗ್ಗೆ 10 ಗಂಟೆಯಿಂದ ಪ್ರಬಂಧ ಸ್ಪರ್ಧೆ, ದಿನಾಂಕ 22 ರಂದು ಬೆಳಿಗ್ಗೆ 10 ಗಂಟೆಗೆ ಶರಣ-ಶರಣೆಯರ ವೇಷ ಭೂಷಣ ಸ್ಪರ್ಧೆ, ದಿನಾಂಕ 23 ರ ಬೆಳಿಗ್ಗೆ 7 ಗಂಟೆಗೆ ಷಟ್‌ಸ್ಥಲ ಧ್ವಜಾರೋಹಣ ಹಾಗೂ ಸಾಮೂಹಿಕ ಇಷ್ಟಲಿಂಗ ಪೂಜೆ ಹಮ್ಮಿಕೊಳ್ಳಲಾಗಿದೆ. ವಿವರಕ್ಕೆ ಸಂಪರ್ಕಿ ಸುವ ಮೊಬೈಲ್ ಸಂಖ್ಯೆ : 99720 84938, 73377 37884.

# ನಗರದ ಕಾಯಿಪೇಟೆಯಲ್ಲಿ ಇಂದಿನಿಂದ ಬಸವ ಜಯಂತ್ಯೋತ್ಸವ



ದಾವಣಗೆರೆ, ಏ.20- ನಗರದ ಕಾಯಿಪೇಟೆ ಶ್ರೀ ಬಸವೇಶ್ವರ ನಗರದಲ್ಲಿರುವ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 23ರ ಭಾನುವಾರ ಶ್ರೀ ಬಸವೇಶ್ವರ ಜಯಂತ್ಯೋತ್ಸವ ನಡೆಯಲಿದೆ.

ನಾಳೆ ದಿನಾಂಕ 22ರ ಶನಿವಾರ ಪ್ರಾತಃಕಾಲ ಶ್ರೀ ಬಸವೇಶ್ವರ ಪಾದಕ್ಕೆ ಮಹಾರುದ್ರಾಭಿಷೇಕ ಜರುಗಲಿದೆ. ನಾಡಿದ್ದು ದಿನಾಂಕ 23ರ ಭಾನುವಾರ ಮುಂಜಾನೆ 6 ಗಂಟೆಗೆ ತೊಟ್ಟಿಲು ಪೂಜೆ, ಸಂಜೆ 7 ಗಂಟೆಗೆ ವಿದ್ಯುತ್ ಅಲಂಕೃತವಾದ ಭವ್ಯವಾದ ಹೂವಿನ ಮಂಟಪದಲ್ಲಿ ಶ್ರೀ ಬಸವೇಶ್ವರ ಮೂರ್ತಿಯ ಮೆರವಣಿಗೆ ರಾಜಬೀದಿಗಳಲ್ಲಿ ಜರುಗಲಿದೆ.

ಬಸವ ಜಯಂತಿ ಪ್ರಯುಕ್ತ ಇದೇ ದಿನಾಂಕ 24ರ ಸೋಮವಾರ ಸರ್ವ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಶ್ರೀ ಬಸವೇಶ್ವರ ದೇವಸ್ಥಾನ ಸೇವಾ ಸಂಘದ ಪದಾಧಿಕಾರಿಗಳು ತಿಳಿಸಿದ್ದಾರೆ.

ಈ ಹಿನ್ನಲೆಯಲ್ಲಿ ಭಕ್ತರು ದೇವಸ್ಥಾನಕ್ಕೆ ಆಗಮಿಸಲು ಅನುಕೂಲವಾಗುವಂತೆ ನಾಡಿದ್ದು ಭಾನುವಾರ ವಾರದ ಸಂತೆಯನ್ನು ರದ್ದು ಪಡಿಸಬೇಕೆಂದು ದೇವಸ್ಥಾನ ಸಂಘದ ಪದಾಧಿಕಾರಿಗಳು ಮಹಾನಗರ ಪಾಲಿಕೆಗೆ ಮನವಿ ಸಲ್ಲಿಸಿದ್ದಾರೆ.

# ಉತ್ತರದ ಜೆಡಿಎಸ್ ಅಭ್ಯರ್ಥಿ ಬಾತಿ ಶಂಕರ್ ನಾಮಪತ್ರ ಸಲ್ಲಿಕೆ



ದಾವಣಗೆರೆ, ಏ. 20- ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಬಾತಿ ಶಂಕರ್ ಅವರು ಇಂದು ನಾಮಪ್ರ ಸಲ್ಲಿಸಿದರು.

ಪಕ್ಷದ ಜಿಲ್ಲಾಧ್ಯಕ್ಷ ಬಿ. ಚಿದಾನಂದಪ್ಪ, ಮಾಜಿ ಶಾಸಕರಾದ ಹೆಚ್.ಎಸ್. ಶಿವಶಂಕರ್ ಅವರ ಸಮ್ಮುಖದಲ್ಲಿ ಜೆಡಿಎಸ್ ಬಿ. ಫಾರಂ ಪಡೆದ ಶಂಕರ್, ನಿಟುವಳ್ಳಿಯ ಶ್ರೀ ದುರ್ಗಾಂಬಿಕಾ ದೇವಸ್ಥಾನದಲ್ಲಿ ದೇವಿಗೆ ಪೂಜೆ ಸಲ್ಲಿಸಿದ ನಂತರ ಚುನಾವಣಾಧಿಕಾರಿಗಳಿಗೆ ಉಮೇದುವಾರಿಕೆ ಅರ್ಜಿ ನೀಡಿದರು.

ಈ ಸಂದರ್ಭದಲ್ಲಿ ಫಕೃದ್ದೀನ್ ದೊಡ್ಮನೆ ಹುಲ್ಲುಮನೆ ಕಿರಣ್, ಎಂ.ಆರ್. ಮುದೇನೂರ್, ರವೀಂದ್ರ ತೊಗಶೆಟ್ಟಿ, ಪ್ರಕಾಶ್, ಮೊಹಮ್ಮದ್, ಕಾಡಜ್ಜಿ ಶ್ರೀಕಾಂತ್, ರೇಖಾ ಸಿಂಗ್, ಗಾಯತ್ರಿ ಹಾಲೇಶ್, ಸುಧಾ ಗೌಡ, ಅಮರೇಶ್, ಬಾತಿ ಶ್ರೀನಿವಾಸ್, ರಿಯಾಜ್ ಪಾಟೀಲ್, ಗಣೇಶಪ್ಪ ಮತ್ತಿತರೆ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಮಕ್ಕಳಿಗೆ ಬೇಸಿಗೆ ಶಿಬಿರ

ನೇತಾಜಿ ಸ್ಕೌಟ್ಸ್ ಗ್ರೂಪ್ ಮತ್ತು ಚೇತನ ಗೈಡ್ ಗ್ರೂಪ್ ವತಿಯಿಂದ ಇಂದಿನಿಂದ ಇದೇ ದಿನಾಂಕ 29 ರವರೆಗೆ ವಿವಿಧ ಕಾರ್ಯಕ್ರಮಗಳನ್ನೊಳಗೊಂಡ ಬೇಸಿಗೆ ಶಿಬಿರ ಆಯೋಜಿಸಲಾಗಿದೆ.

ಇಂದು ಬೆಳಿಗ್ಗೆ 10.30 ರಿಂದ 11.30 ರವರೆಗೆ ಜಗನ್ನಾಥ್ ನಾಡಿಗರ್ ರವರಿಂದ ದೇಶಪ್ರೇಮ ಹಾಗೂ ಮಧ್ಯಾಹ್ನ 12 ರಿಂದ 1 ರವರೆಗೆ ಸಾಲಿಗ್ರಾಮ ಗಣೇಶ್ ಶೆಣೈ ರವರಿಂದ ಶಿಕ್ಷಣ ಪದ್ದತಿ ಕುರಿತಂತೆ ಕಾರ್ಯಕ್ರಮಗಳು ನಡೆಯುತ್ತವೆ ಎಂದು ನೇತಾಜಿ ಸ್ಕೌಟ್ಸ್ ಗ್ರೂಪ್ ನಾಯಕ ಜೆ.ಎಸ್. ವಿಜಯ್, ಚೇತನ್ ಗೈಡ್ ಗ್ರೂಪ್ ನಾಯಕರಾದ ಕಾವೇರಿ ತಿಳಿಸಿದ್ದಾರೆ.

ನಾಳೆ ಶನಿವಾರ ಬೆಳಿಗ್ಗೆ 9.30 ರಿಂದ 10.30 ರವರೆಗೆ ಟಿ.ಎಸ್ ಶಿವಣ್ಣ ರವರಿಂದ ಗಂಟುಗಳು ಮತ್ತು ಕಟ್ಟುಗಳು, ಬೆ. 10.30 ರಿಂದ 11.30 ರವರೆಗೆ ಸಂಚಾರಿ ಅಧಿಕಾರಿ ಜಯ್ಯಪ್ಪ ನಾಯ್ಕ್ ಬಿ.ಎಸ್ ರವರಿಂದ ಸಂಚಾರಿ ನಿಯಂತ್ರಣ ತರಬೇತಿ, ಮಧ್ಯಾಹ್ನ 12 ರಿಂದ 1 ರವರೆಗೆ ಜಗನ್ನಾಥ್ ನಾಡಿಗರ್ ರವರಿಂದ ಕೌಶಲ್ಯ ಅಭಿವೃದ್ಧಿ ಕುರಿತ ಕಾರ್ಯಕ್ರಮಗಳು ನಡೆಯುತ್ತವೆ.

## ಸಾರ್ವಜನಿಕ ಪ್ರಕಟಣೆ

ಶ್ರೀ ವಿನಯ್ ಬಿ.ಎಸ್ ಬಿನ್ ಲೇಟ್ ಶಿವಮೂರ್ತಪ್ಪ, ವಯಸ್ಸು 39 ವರ್ಷ, ವಾಸ: 1ನೇ ಮುಖ್ಯ ರಸ್ತೆ, 5ನೇ ಅಡ್ಡ ರಸ್ತೆ, ವಿಜಯನಗರ ಬಡಾವಣೆ, ಹರಿಹರ ಟೌನ್ ವಾಸಿಯಾದ ಇವರು ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ:-

ಹರಿಹರ ಸಿಟಿ ವಿಜಯ ನಗರ ಬಡಾವಣೆ, ಗಣಪತಿ ದೇವಸ್ಥಾನದ ರಸ್ತೆಯಲ್ಲಿರುವ ಅಸೆಸ್‌ಮೆಂಟ್ ನಂ.1057/1003/1057, ಸ್ವತ್ತಿನ ಸಂಖ್ಯೆ. 4-1-14-64, ವಿಸ್ತೀರ್ಣ 13 ಅಡಿ X 40 ಅಡಿವುಳ್ಳ ಸ್ವತ್ತು ಬಿ.ಶಿವಮೂರ್ತಪ್ಪ ಬಿನ್ ಚನ್ನಬಸಪ್ಪ ಇವರಿಗೆ ದಿನಾಂಕ: 11.11.1980ರಂದು ಎಸ್.ಆರ್. ನಂ. 1470/1980-81ರ ನೋಂದಾಯಿತ ಹಕ್ಕು ಖುಲಾಸೆ ಪತ್ರದ ಮೂಲಕ ಸದರಿ ಸ್ವತ್ತಿನ ಮಾಲೀಕರಾಗಿದ್ದು, ಅವರ ಮರಣ ನಂತರ ಅವರ ವಾರಸುದಾರರಾದ ಶ್ರೀಮತಿ ಕಮಲಮ್ಮ ಬಿ.ಎಸ್ ಮತ್ತು ಶ್ರೀ ವಿನಯ್. ಬಿ.ಎಸ್ ಇವರ ಜಂಟಿ ಖಾತೆಯಲ್ಲಿರುವ ಸ್ವತ್ತಾಗಿರುತ್ತದೆ. ಈ ಮೇಲೆ ಹೇಳಿದ ದಿನಾಂಕ: 11.11.1980 ರಂದು ಎಸ್.ಆರ್. ನಂ. 1470/1980-81ರ ಅಸಲು ನೋಂದಾಯಿತ ಹಕ್ಕು ಖುಲಾಸೆ ಪತ್ರವು ದಿನಾಂಕ: 10.11.2022 ರಂದು ಹರಿಹರದಲ್ಲಿ ಜೆರಾಕ್ಸ್ ಮಾಡಿಸಲು ಹೋದಾಗ ಕಳೆದು ಹೋಗಿದ್ದು, ಸಾಕಷ್ಟು ಸಾರಿ ಹುಡುಕಿದರೂ ಸಹ ಸಿಕ್ಕಿರುವುದಿಲ್ಲ. ಆ ಕಾರಣ ಸದರಿ ಅಸಲು 'ಹಕ್ಕು ಖುಲಾಸೆ ಪತ್ರ'ವು ಯಾರಿಗಾದರೂ ಸಿಕ್ಕಲ್ಲಿ ಮೇಲ್ಕಂಡ ನಮ್ಮ ಕಕ್ಷಿದಾರರನ್ನು ಸಂಪರ್ಕಿಸಿ ಸದರಿ ದಾಖಲೆಯನ್ನು ತಲುಪಿಸಬೇಕಾಗಿ ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಕಟಿಸಲಾಗಿದೆ.

ಈ ಮೇಲ್ಕಂಡ ಸ್ವತ್ತಿನ ಮೇಲೆ ಕೆನರಾ ಬ್ಯಾಂಕ್, ಹರಿಹರ ಶಾಖೆ ಇವರಲ್ಲಿ ಆಧಾರ ಮಾಡಿ ಗೃಹ ನಿರ್ಮಾಣ ಸಾಲ ಪಡೆಯಲು ಇಚ್ಛಿಸಿದ್ದು, ಸದರಿ ಸ್ವತ್ತಿನ ಬಗ್ಗೆ ಯಾರದೇ ಆಗಲೀ ಯಾವುದೇ ರೀತಿಯ ತಂಟೆ, ತಕರಾರು, ಹಕ್ಕು, ಹಿತಾಸಕ್ತಿ ಇದ್ದಲ್ಲಿ ಈ ಪ್ರಕಟಣೆ ಪ್ರಕಟಗೊಂಡ 7 ದಿನಗೊಳಗಾಗಿ ಮೇಲ್ಕಂಡ ವಕೀಲರನ್ನಾಗಲೀ ಅಥವಾ ಬ್ಯಾಂಕ್‌ನ ಮ್ಯಾನೇಜರ್‌ರವರನ್ನಾಗಲೀ ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸತಕ್ಕದ್ದು, ತಪ್ಪಿದಲ್ಲಿ ಯಾರದೇ ತಂಟೆ, ತಕರಾರು/ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದು ಪರಿಗಣಿಸಿ ಸದರಿ ಬ್ಯಾಂಕ್‌ನಿಂದ ಅಡಮಾನ ಸಾಲವನ್ನು ಪಡೆಯಲು ಶ್ರೀಮತಿ ಕಮಲಮ್ಮ.ಬಿ.ಎಸ್ ಮತ್ತು ಶ್ರೀ ವಿನಯ್.ಬಿ.ಎಸ್ ಹಕ್ಕುಳ್ಳುವರಾಗಿರುತ್ತಾರೆ. ಆ ನಂತರ ಬಂದ ಯಾವುದೇ ತಕರಾರುಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

**ಎ.ಎಂ.ಹೆಗಡೆ,** B.Com.,LL.B
ವಕೀಲರು
# 612/1, 7th Main, P.J. Extension,
DAVANGERE-577 002. Mob: 94483 05888


## ಬೇಕಾಗಿದ್ದಾರೆ

**ಚಂದ್ರಗುಪ್ತ ಮೌರ್ಯ ಸಂಯುಕ್ತ ಪದವಿ ಪೂರ್ವ ಕಾಲೇಜು ಹಾಗೂ ಆದಿಕೇಶವ ಅಕಾಡೆಮಿ, ಬೆಳ್ಳೂಡಿ - 577 601**
ಹರಿಹರ (ತಾ), ದಾವಣಗೆರೆ (ಜಿ)

| NO. | JOB | QUALIFICATION |
|---|---|---|
| 1. | P.R.O | M.B.A., (Marketing) |
| 2. | Data Entry Operator | Any Degree with Computer (Photoshop, Coral Draw & Page Maker 7.2) |

Mail ID : aadikeshavacademydvg@gmail.com
95352 50766, 90085 26469, 63607 12877
*(Last Date to Apply : 25th April 2023)*

## ರಾಜನಹಳ್ಳಿ ಮದ್ದುರಾಯಪ್ಪ ಜ್ಯೂಯಲರಿ ಮಾರ್ಟ್

ದಯಾನಂದ ಬಿಲ್ಡಿಂಗ್, ಮಂಡಿಪೇಟೆ, ದಾವಣಗೆರೆ.
ಫೋ. : 08192-296550, ಮೊ. : 74835 28258

### ವೈವಿಧ್ಯಮಯ ಆಭರಣಗಳ ಮೇಳ

ಪ್ರೀತಿಯ ಬಂಧುಗಳೇ,

ಶ್ರೀ ಶೋಭಕೃತು ನಾಮ ಸಂವತ್ಸರದ ಅಕ್ಷಯ ತೃತೀಯ ಮತ್ತು ಬಸವ ಜಯಂತಿಯ ಶುಭಾಶಯಗಳು ಹಾಗು ಸೂರ್ಯ ದಿವ್ಯಕಿರಣಗಳು ನಮ್ಮೆಲ್ಲರಿಗೆ ಹೊಸ ಚೇತನವನ್ನು ನೀಡಿವೆ. ಬನ್ನಿ... ಸಂಭ್ರಮಿಸೋಣ.

ಏಪ್ರಿಲ್ ತಿಂಗಳ ದಿನಾಂಕ 21, 22 ಮತ್ತು 23 ರಂದು ನಮ್ಮ ಅಂಗಡಿಯಲ್ಲಿ ವೈವಿಧ್ಯಮಯ ಆಭರಣಗಳ ಮೇಳ ನಡೆಯಲಿದೆ ಹಾಗೂ ಕರ್ನಾಟಕ ಗೋಲ್ಡ್ ಫೆಸ್ಟಿವಲ್‌ನ್ನು ಹಮ್ಮಿಕೊಂಡಿದ್ದೇವೆ. ನಿಮ್ಮವರೊಂದಿಗೆ ಬಂಧು ಆಭರಣಗಳನ್ನು ಖರೀದಿಸಿ, ವಿಶೇಷ ರಿಯಾಯಿತಿ ಹಾಗೂ ಹಲವಾರು ಆಕರ್ಷಕ ಬಹುಮಾನಗಳನ್ನು ಪಡೆಯಿರಿ.

ನಿಮ್ಮ **ಆರ್.ಡಿ. ಬದ್ರಿನಾಥ್**
*ಮೂರು ತಲೆಮಾರುಗಳಿಂದ ಚಿನ್ನ, ಬೆಳ್ಳಿ ಮತ್ತು ರತ್ನ ಪಡೆ*
*ಬೇಡಿಕೆಗಳ ಪೂರೈಸಲು ನಿಮ್ಮ ಸೇವೆಯಲ್ಲಿ ತೊಡಗಿರುವ ಆರ್.ಎಂ.ಜೆ.ಎಂ.*

## ರಾಜ್ಯದ ಚುನಾವಣಾ ಕಣಕ್ಕೆ 3,632 ಅಭ್ಯರ್ಥಿಗಳು

ಬೆಂಗಳೂರು, ಏ. 20 – ರಾಜ್ಯ ವಿಧಾನಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸುವ ಅವಧಿ ಪೂರ್ಣಗೊಂಡಿದ್ದು, ಒಟ್ಟು 3,632 ಅಭ್ಯರ್ಥಿಗಳು ಕಣಕ್ಕೆ ಧುಮುಕಿದ್ದಾರೆ. ಒಬ್ಬ ಅಭ್ಯರ್ಥಿ ನಾಲ್ಕು ಸೆಟ್ ನಾಮಪತ್ರ ಸಲ್ಲಿಸಲು ಅವಕಾಶ ಇದೆ. ಹೀಗಾಗಿ 3,632 ಅಭ್ಯರ್ಥಿಗಳು ಒಟ್ಟಾರೆ 5,102 ನಾಮಪತ್ರಗಳನ್ನು ಸಲ್ಲಿಸಿದ್ದಾರೆ. ಇವರಲ್ಲಿ 3,327 ಪುರುಷ, 304 ಮಹಿಳೆ ಹಾಗೂ ಒಬ್ಬರು ತೃತೀಯ ಲಿಂಗಿಯಾಗಿದ್ದಾರೆ.

ಬಿಜೆಪಿಯಿಂದ 707 ಸೆಟ್, ಕಾಂಗ್ರೆಸ್‌ನಿಂದ 651 ಹಾಗೂ ಜೆಡಿಎಸ್‌ನಿಂದ 455 ನಾಮಪತ್ರಗಳು ದಾಖಲಾಗಿವೆ. ಆಮ್ ಆದ್ಮಿ ಪಾರ್ಟಿಯಿಂದ 373, ಬಿಎಸ್‌ಪಿಯಿಂದ 179 ಹಾಗೂ ಸಿಪಿಐ (ಎಂ) ಮತ್ತು ಎನ್.ಪಿ.ಪಿ. ಪಕ್ಷಗಳಿಂದ ತಲಾ 5 ನಾಮಪತ್ರಗಳು ದಾಖಲಾಗಿವೆ. ಮಾನ್ಯತೆ ಪಡೆಯದ ಪಕ್ಷಗಳಿಂದ 1,007 ಹಾಗೂ ಸ್ವತಂತ್ರ ಅಭ್ಯರ್ಥಿಗಳು 1,720 ನಾಮಪತ್ರಗಳನ್ನು ದಾಖಲಿಸಿದ್ದಾರೆ. ಕೊನೆಯ ದಿನದಂದು ಒಟ್ಟು 1,691 ನಾಮಪತ್ರಗಳು ದಾಖಲಾಗಿವೆ. ಇವರಲ್ಲಿ 146 ಮಹಿಳೆಯರಾಗಿದ್ದಾರೆ. ಮುಳಬಾಗಿಲಿನಲ್ಲಿ ಅತಿ ಹೆಚ್ಚಿನ 30 ಅಭ್ಯರ್ಥಿಗಳು ನಾಮಪತ್ರ ದಾಖಲಿಸಿದ್ದಾರೆ. ಜೇವರ್ಗಿ, ಬಳ್ಳಾರಿ ನಗರ ಹಾಗೂ ಚಿತ್ರದುರ್ಗಗಳಲ್ಲಿ 29 ಅಭ್ಯರ್ಥಿಗಳಿದ್ದಾರೆ. ತೀರ್ಥಹಳ್ಳಿಯಲ್ಲಿ ಅತಿ ಕಡಿಮೆ ಆರು ಅಭ್ಯರ್ಥಿಗಳಿದ್ದಾರೆ.

## ಬಿಜೆಪಿಯ ಅಲೆ : ಕಾಂಗ್ರೆಸ್ ಮನೆಯಲ್ಲಿ ಮಲಗುವ ಪರಿಸ್ಥಿತಿ

### ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ ಬಹಿರಂಗ ಸಭೆಯಲ್ಲಿ ಬಿಜೆಪಿ ಅಭ್ಯರ್ಥಿ ನಾಗರಾಜ ಲೋಕಿಕೆರೆ



ದಾವಣಗೆರೆ, ಏ. 20- ಕಾಂಗ್ರೆಸ್ ಪಕ್ಷ ಎರಡು ತಿಂಗಳಿನಿಂದ ಪ್ರಚಾರ ನಡೆಸುತ್ತಿದೆ. ಈ ಬಾರಿ ಬಿಜೆಪಿ ಸೋಲುತ್ತದೆ ಎಂದು ಪ್ರಚಾರದ ವೇಳೆ ಹೇಳುತ್ತಿದ್ದರು. ಆದರೆ, ಈಗ ಬಿಜೆಪಿಯ ಅಲೆ ನೋಡಿದರೆ ಕಾಂಗ್ರೆಸ್‌ನವರು ಮನೆಯಲ್ಲಿ ಮಲಗುವ ಪರಿಸ್ಥಿತಿ ಎದುರಾಗಿದೆ ಎಂದು ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ ಲೋಕಿಕೆರೆ ತಿಳಿಸಿದರು.

ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ನಾಗರಾಜ್ ಲೋಕಿಕೆರೆ ಅವರು ನಾಮಪತ್ರ ಸಲ್ಲಿಸುವ ಮುನ್ನ ಪಾಲಿಕೆ ಹೊರಗೆ ನಡೆಸಿದ ಬಹಿರಂಗ ಸಭೆಯಲ್ಲಿ ಮಾತನಾಡಿದರು.

ಬಿಜೆಪಿ ಇವತ್ತು ಕಾಂಗ್ರೆಸ್‌ನ ಎದುರು ಸಾಮಾನ್ಯ ಕಾರ್ಯಕರ್ತನಿಗೆ ಟಿಕೆಟ್ ನೀಡಿ ಸ್ಪರ್ಧೆಗೆ ಇಳಿಸಿದೆ. ಕಾರ್ಯಕರ್ತರು ಬಹು ಎಚ್ಚರಿಕೆಯಿಂದ ಈ ಚುನಾವಣೆಯಲ್ಲಿ ಕೆಲಸ ಮಾಡಬೇಕು ಎಂದು ಕಾರ್ಯಕರ್ತರಿಗೆ ಮುನ್ನೆಚ್ಚರಿಕೆ ನೀಡಿದರು.

ಚುನಾವಣೆಯಲ್ಲಿ ಮತದಾರರಿಗೆ ಆಮಿಷವೊಡ್ಡಿ ಅವರನ್ನು ಕೊಂಡುಕೊಳ್ಳಬಹುದು ಎಂದು ತಿಳಿದುಕೊಂಡಿರುವ ಕಾಂಗ್ರೆಸ್ಸಿಗರಿಗೆ ಮೇ 10ರ ಚುನಾವಣೆಯಲ್ಲಿ ನಿಮ್ಮ ಹಣವನ್ನು ನಿಮ್ಮ ಮನೆಯಲ್ಲೇ ಇಟ್ಟುಕೊಳ್ಳಿ ಎಂದು ತೋರಿಸಿಕೊಡಬೇಕು. ಈ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿರುವ ನನಗೆ ಗೆಲ್ಲಿಸುವ ಮೂಲಕ ರಾಜ್ಯದಲ್ಲಿ ಬಿಜೆಪಿ ಸರ್ಕಾರ ತರುವ ಮೂಲಕ ಕೇಂದ್ರದಲ್ಲಿನ ಮೋದಿ ಸರ್ಕಾರದ ಕೈ ಬಲಪಡಿಸೋಣ ಎಂದರು.

ಕೇಂದ್ರ ಸರ್ಕಾರ ಕಿಸಾನ್ ಸಮ್ಮಾನ್ ಯೋಜನೆಯಡಿ ರೈತರಿಗೆ ಆರು ಸಾವಿರ ರೂ. ನೀಡಿದೆ. ಇದರಿಂದ ಜಿಲ್ಲೆಯಲ್ಲಿ 1.50 ಲಕ್ಷಕ್ಕಿಂತ ಜಾಸ್ತಿ ಜನರು ಸುಮಾರು 460 ಕೋಟಿ ರೂ. ಪ್ರಯೋಜನ ಪಡೆದಿದ್ದಾರೆ. ಅದಕ್ಕಾಗಿ ಡಬಲ್ ಇಂಜಿನ್ ಸರ್ಕಾರ ಬೇಕಾಗಿದೆ ಎಂದರು.

## ಭರ್ಜರಿ ಮೆರವಣಿಗೆ, ಅಜಯ್ ಕುಮಾರ್ ನಾಮಪತ್ರ ಸಲ್ಲಿಕೆ



ದಾವಣಗೆರೆ, ಏ. 20- ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಬಿ.ಜಿ. ಅಜಯ್ ಕುಮಾರ್ ಭಾರೀ ಜನಸ್ತೋಮದೊಂದಿಗೆ ಆಗಮಿಸಿ ಇಂದು ತಮ್ಮ ಉಮೇದುವಾರಿಕೆಯ ಅರ್ಜಿ ಸಲ್ಲಿಸಿದರು.

ನಗರದೇವತೆ ಶ್ರೀ ದುರ್ಗಾಂಬಿಕಾ ದೇವಿಗೆ ಪೂಜೆ ಸಲ್ಲಿಸಿ ನಗರದಲ್ಲಿ ರೋಡ್ ಶೋ ನಡೆಸಿದರು. ರೋಡ್ ಶೋನಲ್ಲಿ ನಾಮಪತ್ರ ಸಲ್ಲಿಕೆಗೆ ನೆಚ್ಚಿನ ಯುವ ನಾಯಕನಿಗೆ ಬೆಂಬಲ ಸೂಚಿಸಲು ಹೆಚ್ಚಿನ ಜನ ಸೇರಿದ್ದರು. ಬಿ.ಜೆ.ಪಿ ಅಭ್ಯರ್ಥಿಗೆ ಜೈಕಾರ ಹಾಕಿ ಬೆಂಬಲ ವ್ಯಕ್ತಪಡಿಸಿದರು.

ಮಾಜಿ ಜಿಲ್ಲಾ ಅಧ್ಯಕ್ಷ ಯಶವಂತರಾವ್ ಜಾಧವ್, ಜಿ.ಎಸ್. ಅನಿತ್‌ಕುಮಾರ, ಜಿಲ್ಲಾ ಅಧ್ಯಕ್ಷ ಹನಗವಾಡಿ ವೀರೇಶ್, ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ದೇವರಮನಿ ಶಿವಕುಮಾರ್, ವೈ. ಮಲ್ಲೇಶ್, ಕೊಳೇನಹಳ್ಳಿ ಸತೀಶ್, ಮಾಜಿ ಮೇಯರ್ ಎಸ್.ಟಿ. ವೀರೇಶ್ ಸೋಗಿ ಶಾಂತಕುಮಾರ್ ಅವರು ತೆರೆದ ವಾಹನದಲ್ಲಿ ಸಾಗಿದರು.

ಈ ಸಂದರ್ಭದಲ್ಲಿ ಮಾಜಿ ಉಪ ಮೇಯರ್ ಗಾಯತ್ರಿ ಬಾಯಿ, ಸೌಮ್ಯ ನರೇಂದ್ರ ಕುಮಾರ್, ಮಾಜಿ ಸ್ಥಾಯಿ ಸಮಿತಿ ಅಧ್ಯಕ್ಷ ಎಲ್.ಡಿ ಗೋಣೆಪ್ಪ, ರಾಕೇಶ್ ಜಾಧವ್, ಬಿ.ಎಂ. ರುದ್ರೇಗೌಡ, ಶಿವಮೂರ್ತಿ, ಕೃಷ್ಣ ಮೂರ್ತಿ ಪವಾರ್, ಎಚ್.ಎಂ. ರುದ್ರಮುನಿ ಸ್ವಾಮಿ, ಗೌಳಿ ಲಿಂಗರಾಜ್ ದಕ್ಷಿಣ ಅಧ್ಯಕ್ಷ ಆನಂದರಾವ್ ಸಿಂದೆ, ಪ್ರಧಾನ ಕಾರ್ಯದರ್ಶಿಗಳಾದ ರಾಜು ನಿಲಗುಂದ, ಗುರು ಪ್ರಸಾದ, ವಿಜಯಕುಮಾರ್ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಭಾಗ್ಯ ಪಿಸಾಳೆ, ಮತ್ತಿತರ ಪ್ರಮುಖರು, ಕಾರ್ಯಕರ್ತರು ಇದ್ದರು.

ದಾವಣಗೆರೆ ದಕ್ಷಿಣ ಮತ್ತು ಉತ್ತರ ಸಮ್ಮಿಲನವಾಗಿದೆ. ಒಂದೇ ಮನೆತನಕ್ಕೆ ಅಧಿಕಾರ ಕೊಟ್ಟರೆ ದಾವಣಗೆರೆ ಅಭಿವೃದ್ಧಿ ಕುಂಠಿತವಾಗುತ್ತದೆ ಅನ್ನುವುದನ್ನು ಜನರು ನೋಡಿದ್ದು, ಇದು ಸಾಕಪ್ಪಾ ಎಂದು ಬದಲಾವಣೆ ಬಯಸಿದ್ದಾರೆ ಎಂದು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ.ಜಿ. ಅಜಯ ಕುಮಾರ್ ಹೇಳಿದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುವ ಮುನ್ನ ನಡೆದ ಬಹಿರಂಗ ಸಭೆಯಲ್ಲಿ ಅವರು ಮಾತನಾಡಿದರು.

ಇವತ್ತು ಬೂತ್‌ಮಟ್ಟದಿಂದ ಪಕ್ಷ ಸಂಘಟಿಸಿದಂತಹ ಯುವ ಕಾರ್ಯಕರ್ತರಿಗೆ ಈ ಬಾರಿಯ ಚುನಾವಣೆಯಲ್ಲಿ ಅವಕಾಶ ನೀಡಲಾಗಿದ್ದು, ಅದರ ಮುಖಂಡತ್ವವನ್ನು ಪಕ್ಷದ ಹಿರಿಯರು ವಹಿಸಿಕೊಂಡಿದ್ದಾರೆ. ಹೀಗಾಗಿ, ಮೇ 10ರಂದು ನಡೆಯುವ ಚುನಾವಣೆಯಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಾಧನೆಗಳು, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ್ ಅವರ ಸಾಧನೆಗಳನ್ನು ಮತದಾರರ ಮನೆ ಬಾಗಿಲಿಗೆ ಮುಟ್ಟಿಸಿ, ಬಿಜೆಪಿಗೆ ನಾವುಗಳು ಮತ ಕೇಳುತ್ತಿದ್ದೇವೆ ಎಂದರು.

ಬಿಸಿಲನ್ನು ಲೆಕ್ಕಿಸಿದೆ ಕಾರ್ಯಕರ್ತರು ಬಿಜೆಪಿಯ ಶಕ್ತಿಯನ್ನು ತೋರಿಸಿಕೊಟ್ಟಿದ್ದಾರೆ. ಇದರ ಉದ್ದೇಶ ನಾವುಗಳು ಬಿಜೆಪಿಯನ್ನು ಗೆಲ್ಲಿಸಬೇಕು ಎಂಬುವುದಾಗಿದೆ. ಅಭಿಮಾನ ಮತ್ತು ಪ್ರೀತಿಯನ್ನು ಪಕ್ಷದ ಅಭ್ಯರ್ಥಿಗಳಿಗೆ ತೋರಿಸುತ್ತಿದ್ದಾರೆ ಎಂದು ಹೇಳಿದರು.

ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತ ರಾವ್ ಜಾಧವ್ ಮಾತನಾಡಿ, ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಕಾರ್ಯಕರ್ತರು ಮೈಮರೆಯಬಾರದು. ಇಂದಿನ ಮೆರವಣಿಗೆಗೆ ಮಾತ್ರ ತಮ್ಮ ಹುಮ್ಮಸ್ಸನ್ನು ತೋರದೆ, ದಾವಣಗೆರೆ ಎರಡು ಕ್ಷೇತ್ರಗಳಲ್ಲೂ ಬಿಜೆಪಿಯ ಗೆಲುವಿಗೆ ಶ್ರಮಿಸಬೇಕು ಎಂದರು.

## ಹದಡಿ ಬ್ಲಾಕ್ ಕಾಂಗ್ರೆಸ್ ವ್ಯಾಪ್ತಿಯಲ್ಲಿ ಇಂದು ಎಸ್ಸೆಸ್ ಚುನಾವಣಾ ಪ್ರಚಾರ



ದಕ್ಷಿಣ ವಿಧಾನಸಭಾ ಕ್ಷೇತ್ರದ ಹದಡಿ ಬ್ಲಾಕ್ ಕಾಂಗ್ರೆಸ್ ವ್ಯಾಪ್ತಿಯಲ್ಲಿ ಅಭ್ಯರ್ಥಿ ಶಾಮನೂರು ಶಿವಶಂಕರಪ್ಪ ಅವರ ಪರ ಇಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 3 ರವರೆಗೆ ಹನುಮಂತಾಪುರ, ಹೊಸಬೆಳವನೂರು, ಹಳೇಬೆಳವನೂರು, ಉಜ್ಜಿನಿಪುರ, ತುರ್ಚಘಟ್ಟ, ಚಂದ್ರೇನಹಳ್ಳಿ, ಬುಳ್ಳಾಪುರ, ಬುಳ್ಳಾಪುರ ಕ್ಯಾಂಪ್, ಹೊಸನಾಯಕನಹಳ್ಳಿಯಲ್ಲಿ ಪ್ರಚಾರ ಹಮ್ಮಿಕೊಳ್ಳಲಾಗಿದೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸಿ.ನಿಂಗಣ್ಣ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಎಸ್ಸೆಸ್ಸೆಂ ಚುನಾವಣಾ ಪ್ರಚಾರ



ಮಾಜಿ ಸಚಿವರು, ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್ ಅವರು ದಾವಣಗೆರೆ ಉತ್ತರ ವಿಧಾನ ಸಭಾ ಕ್ಷೇತ್ರದ ವಿವಿಧ ಕಡೆಗಳಲ್ಲಿ ಇಂದು ಪ್ರಚಾರ ನಡೆಸುವರು. ಇಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ 39ನೇ ವಾರ್ಡ್ ನ ವಿದ್ಯಾನಗರ ಹಾಗೂ ಸಂಜೆ 4 ರಿಂದ ಎಂಸಿಸಿ ಬಿ ಬ್ಲಾಕ್‌ನಲ್ಲಿ ಡಾಕ್ಟರ್ ಅಸೋಸಿಯೇಷನ್ ಏರ್ಪಡಿಸಿರುವ ಸಭೆಯಲ್ಲಿ ಪಾಲ್ಗೊಳ್ಳುವರು. ಸಂಜೆ 5 ರಿಂದ ರಾತ್ರಿ 9 ರವರೆಗೆ 39ನೇ ವಾರ್ಡ್ ನ ವಿದ್ಯಾನಗರದಲ್ಲಿ ಪ್ರಚಾರ ನಡೆಸುವರು.

## ನಗರದಲ್ಲಿ ಇಂದು ಇಫ್ತಿಯಾರ್ ಕೂಟ

ತಂಜೀಮುಲ್ ಮುಸ್ಲಿಮೀನ್ ಫಂಡ್ ಅಸೋಸಿಯೇಷನ್ ವತಿಯಿಂದ ಜೆ.ಇಮಾಂ ನಗರದಲ್ಲಿರುವ ನೂರಾನಿ ಶಾದಿಮಹಲ್‌ನಲ್ಲಿ ಇಂದು ಸಂಜೆ 6 ಗಂಟೆಗೆ ಇಫ್ತಿಯಾರ್ ಕೂಟ ನಡೆಯಲಿದೆ.

## ಲಿಂಗಾಯತರೇ ರಾಜ್ಯದ ಮುಖ್ಯಮಂತ್ರಿ



ಬೆಳಗಾವಿ, ಏ. 20 – ಲಿಂಗಾಯತ ಸಮುದಾಯದವರೇ ರಾಜ್ಯದ ಮುಖ್ಯಮಂತ್ರಿಯಾಗಲಿದ್ದಾರೆ. ಇದು ಪಕ್ಷದಲ್ಲಿನ ಸಾರ್ವತ್ರಿಕ ಸತ್ಯ ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಹೇಳಿದ್ದಾರೆ.

ಇತ್ತೀಚೆಗೆ ಬಿಜೆಪಿ ನಾಯಕರಾದ ಲಕ್ಷ್ಮಣ ಸವದಿ ಹಾಗೂ ಜಗದೀಶ್ ಶೆಟ್ಟರ್ ಅವರು ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದರು. ನಂತರದಿಂದ ಬಿಜೆಪಿ ಲಿಂಗಾಯತ ವಿರೋಧಿ ಎಂದು ಕಾಂಗ್ರೆಸ್ ಹೇಳುತ್ತಾ ಬಂದಿದೆ. ಈ ಹಿನ್ನೆಲೆಯಲ್ಲಿ ಸಿಂಗ್ ಹೇಳಿಕೆ ಪ್ರಾಮುಖ್ಯತೆ ಪಡೆದುಕೊಂಡಿದೆ.

ಕಾಂಗ್ರೆಸ್‌ಗೆ ಬೇರೆ ಯಾವುದೇ ವಿಷಯ ಇಲ್ಲ. ಹೀಗಾಗಿ ಲಿಂಗಾಯತರಿಗೆ ಅನ್ಯಾಯವಾಗಿದೆ ಎಂದು ಹೇಳುತ್ತಿದೆ. ಅದು ಹೇಗೆ ಸಾಧ್ಯ? ಹುಬ್ಬಳ್ಳಿ - ಧಾರವಾಡ ಕೇಂದ್ರ ಸ್ಥಾನದಲ್ಲೂ ಸಹ ಬಣಜಿಗ ಲಿಂಗಾಯತರಾದ ಮಹೇಶ್ ಟೆಂಗಿನಕಾಯಿ ಅವರಿಗೆ ಟಿಕೆಟ್ ನೀಡಲಾಗಿದೆ ಎಂದು ಸಿಂಗ್ ತಿಳಿಸಿದ್ದಾರೆ.

ಲಿಂಗಾಯತರು ಮುಂದಿನ ಮುಖ್ಯಮಂತ್ರಿಯಾಗಲಿದ್ದಾರೆಯೇ? ಎಂಬ ಪ್ರಶ್ನೆಗೆ ಉತ್ತರಿಸಿರುವ ಸಿಂಗ್, ಇದು ಎಲ್ಲರಿಗೂ ಗೊತ್ತಿದೆ. ಬಿಜೆಪಿಯಿಂದ ಯಾರು ಮುಖ್ಯಮಂತ್ರಿಯಾಗಲಿದ್ದಾರೆ ಎಂಬುದು ಸಾರ್ವತ್ರಿಕ ಸತ್ಯ ಎಂದಿದ್ದಾರೆ.

## ನಮ್ಮ ಜೊತೆ ನಿಲ್ಲುವ ನಾಯಕನನ್ನು ಚುನಾಯಿಸಬೇಕು : ಪ್ರಭಾ




ದಾವಣಗೆರೆ, ಏ.20- ಏನೂ ಕೆಲಸವನ್ನೇ ಮಾಡದೇ ಯಾವಾಗಲೂ ನಿಮ್ಮ ಕೈಗೆ ಸಿಗುವ ನಾಯಕರಿಗಿಂತ, ನಮಗೆ ಅವಶ್ಯಕತೆ ಇದ್ದಾಗ ನಮ್ಮ ಜೊತೆ ನಿಲ್ಲುವ ನಾಯಕನನ್ನು ನಾವು ಆರಿಸಬೇಕಾಗಿದೆ ಎಂದು ಡಾ. ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದರು.

ನಗರದ ವಿದ್ಯಾನಗರ, ತರಳಬಾಳು ಬಡಾವಣೆಯಲ್ಲಿ ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್.ಮಲ್ಲಿಕಾರ್ಜುನ್ ಅವರ ಪರವಾಗಿ ಚುನಾವಣಾ ಪ್ರಚಾರ ಕಾರ್ಯಕ್ರಮದಲ್ಲಿ ಅವರು ಭಾಗಿಯಾಗಿದ್ದರು. ಮುಖ್ಯವಾಗಿ ಮಹಿಳೆಯರ ಜೊತೆ ಮಾತನಾಡಿದ ಅವರು, ಕ್ಷೇತ್ರದ ಜನರ ಅವಶ್ಯಕತೆಗಳನ್ನು ಪೂರೈಸುವ ಸಾಮರ್ಥ್ಯವಿರುವ ಕಾಂಗ್ರೆಸ್ ಅಭ್ಯರ್ಥಿಗೆ ಮತ ನೀಡಿ ಗೆಲ್ಲಿಸುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಗಾಯತ್ರಿ ಮೂಗನಗೌಡ್ರು, ಶಾಂತಮ್ಮ ದಿಳ್ಳಪ್ಪ, ಡಾ. ಲತಾ, ಡಾ.ಶಾಂತಲಾ ಮತ್ತಿತರರು ಉಪಸ್ಥಿತರಿದ್ದರು.


## ಗೌಡ್ರು ಹರಿಯಪ್ಪ ಅಮರಾವತಿ ನಿಧನ



ಹರಿಹರ ಭೀಮ್ ನಗರದ ನಾಗನಗೌಡ್ರು ಕಾಲೋನಿ ವಾಸಿ
ದಿ. ನಾಗನಗೌಡ್ರು ಇವರ ಸುಪುತ್ರ
**ಗೌಡ್ರು ಹರಿಯಪ್ಪ**
ಇವರು ದಿನಾಂಕ 20-04-23ರ ಗುರುವಾರ ಸಂಜೆ 7.30 ಕ್ಕೆ ನಿಧನರಾಗಿರುತ್ತಾರೆ. ಮೃತರಿಗೆ 78 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಓರ್ವ ಪುತ್ರಿ, ಆರು ಜನ ಸಹೋದರರು, ಮೂವರು ಸಹೋದರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 21-04-23ರ ಶುಕ್ರವಾರ ಹರಿಹರ ತಾಲ್ಲೂಕು ಅಮರಾವತಿ ಗ್ರಾಮದ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
**ದುಃಖತಪ್ತ ಕುಟುಂಬ ವರ್ಗ**

## ಶ್ರೀಮತಿ ವಿನೋದ ಶಿವಕುಮಾರ್ ನಿಧನ



**ದಿ|| ಶ್ರೀಮತಿ ವಿನೋದ ಶಿವಕುಮಾರ್**

ದಾವಣಗೆರೆ ನಗರದ ಆಂಜನೇಯ ಬಡಾವಣೆ ವಾಸಿ ಭೀಮಸಮುದ್ರದ
**ಜಿ.ಜೆ. ಶಿವಕುಮಾರ್** ಇವರ ಧರ್ಮಪತ್ನಿ
**ಶ್ರೀಮತಿ ವಿನೋದ ಶಿವಕುಮಾರ್** ಇವರು
ದಿನಾಂಕ: 20-04-2023ರ ಗುರುವಾರ ಸಂಜೆ 6.50 ಗಂಟೆಗೆ
ದೈವಾಧೀನರಾಗಿರುತ್ತಾರೆ ಎಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 58 ವರ್ಷ ವಯಸ್ಸಾಗಿದ್ದು, ಪತಿ, ಪುತ್ರಿ, ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಆಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ: 21-04-2023ರ ಶುಕ್ರವಾರ ಮಧ್ಯಾಹ್ನ 2.00 ಗಂಟೆಗೆ ಭೀಮಸಮುದ್ರದಲ್ಲಿ ನೆರವೇರಿಸಲಾಗುವುದು.

ವಿ.ಸೂ: ಮೃತರ ಪಾರ್ಥಿವ ಶರೀರವನ್ನು ಇಂದು ಬೆಳಿಗ್ಗೆ 11.00 ಗಂಟೆಗೆಯವರೆಗೆ ಆಂಜನೇಯ ಬಡಾವಣೆಯ 12ನೇ ಕ್ರಾಸ್‌ನಲ್ಲಿರುವ ಮೃತರ ನಿವಾಸದಲ್ಲಿ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇಡಲಾಗುವುದು.

**ದುಃಖತಪ್ತ ಕುಟುಂಬ ವರ್ಗದವರು**
ಭೀಮಸಮುದ್ರ ಗೌಡ್ರು ವಂಶಸ್ಥರು. ಪಟೇಲ್ ವಂಶಸ್ಥರು ಹಾಗೂ ತೋಗಲೇರಿ ಗೌಡ್ರು ವಂಶಸ್ಥರು.
ಜಿ.ಜೆ. ಶಿವಕುಮಾರ್ ಮೊ: 94495 80705, 97413 82464.




## ದ್ವಿತೀಯ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀ ದತ್ತಾತ್ರೇಯ ಆರ್.ರೇವಣಕರ್**

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು...ನೀವು ತೋರಿದ ಸನ್ಮಾರ್ಗದಲ್ಲಿ ಮುನ್ನಡೆಯುತ್ತಾ... ಸದಾ ಸ್ಮರಣೆಯಲ್ಲಿರುವ...

ಪತ್ನಿ : ಶ್ರೀಮತಿ ಮೀನಾಕ್ಷಿ ದತ್ತಾತ್ರೇಯ ರೇವಣಕರ್
ಸುರೇಂದ್ರ ಡಿ. ರೇವಣಕರ್ ಮತ್ತು
ರವೀಂದ್ರ ಡಿ. ರೇವಣಕರ್ ಮತ್ತು ಮಕ್ಕಳು,
ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು
ಹಾಗೂ ಬಂಧು-ಮಿತ್ರರು.

**ನ್ಯೂ ಎಂ.ಜಿ.ಎಸ್. ಜ್ಯೂಯಲರ್ಸ್**
ಮಂಡಿಪೇಟೆ ದಾವಣಗೆರೆ.
ಮೊ: 94489 29897, 94813 08777


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte